ಅತ್ಯಂತ ಪ್ರಮುಖ ನಿಯಮಗಳು ಮತ್ತು ಷರತ್ತುಗಳು

SBI card

ಅತ್ಯಂತ ಪ್ರಮುಖ ನಿಯಮಗಳು ಮತ್ತು ಷರತ್ತುಗಳು - ಎಸ್‌ಬಿಐ ಕಾರ್ಪೋರೇಟ್ ಕಾರ್ಡ್ (ವೈಯಕ್ತಿಕ ದಾಯಿತ್ವ ಗ್ರಾಹಕರಿಗೆ ಮಾತ್ರ ಅನ್ವಯಿಸುತ್ತದೆ)

1. ಫೀಸುಗಳು ಮತ್ತು ಶುಲ್ಕಗಳು

A. ಸೇರ್ಪಡೆ ಫೀಸುಗಳು, ವಾರ್ಷಿಕ ಫೀಸುಗಳು ಮತ್ತು ನವೀಕರಣ ಫೀಸುಗಳು (ಅನ್ವಯಿಸಿದಲ್ಲಿ)

ಎಸ್‌ಬಿಐ ಕಾರ್ಪೋರೇಟ್ ಕಾರ್ಡ್ (ಎಸ್‌ಬಿಐ ಕಾರ್ಡ್) ಮೇಲೆ ಸೇರ್ಪಡೆ ಫೀಸುಗಳು, ವಾರ್ಷಿಕ ಫೀಸುಗಳು ಮತ್ತು ನವೀಕರಣ ಫೀಸುಗಳು ಅನ್ವಯವಾಗುತ್ತವೆ. ಈ ಫೀಸುಗಳು ಕಾರ್ಪೋರೇಟ್ನಿಂದ ಕಾರ್ಪೋರೇಟ್ಗೆ ಬದಲಾಗಬಹುದು ಮತ್ತು ಕಾರ್ಡ್‌ಧಾರಕರಿಂದ ಕಾರ್ಡ್‌ಧಾರಕರಿಗೆ ಮತ್ತು ಕೊಡುಗೆಯಿಂದ ಕೊಡುಗೆಗೆ ಸಹಾ ಬದಲಾಗಬಹುದು. ಇವುಗಳು ಕಾರ್ಪೋರೇಟ್ ಕಾರ್ಡ್‌ಗೆ ಅರ್ಜಿ ಸಲ್ಲಿಸುವ ಸಮಯದಲ್ಲಿ ಕಾರ್ಪೋರೇಟ್ ಮತ್ತು ಕಾರ್ಡ್‌ಧಾರಕರಿಗೆ ತಿಳಿಸಿದಂತೆ ಇರಬೇಕು. ಸೇರ್ಪಡೆ ಮತ್ತು ವಾರ್ಷಿಕ ಫೀಸುಗಳನ್ನು, ಅನ್ವಯವಾಗುವಂತೆ, ನೇರವಾಗಿ ಕಾರ್ಡ್‌ಧಾರಕರ ಖಾತೆಗೆ ವಿಧಿಸಲಾಗುತ್ತದೆ ಮತ್ತು ಅದನ್ನು ವಿಧಿಸಿದ ತಿಂಗಳ ಕಾರ್ಡ್ ಹೇಳಿಕೆಯಲ್ಲಿ ಪ್ರದರ್ಶಿಸಲಾಗುತ್ತದೆ.

B. ನಗದು ಮುಂಗಡ ಫೀಸು (ಅನ್ವಯಿಸಿದಲ್ಲಿ)

ಕಾರ್ಡ್‌ಧಾರಕರು ಭಾರತದ ಎಟಿಎಂ/ಕ್ಯಾಶ್‌ಪಾಯಿಂಟ್‌ಗಳಿಂದ ಅಥವಾ ವಿದೇಶದಲ್ಲಿರುವ ಎಟಿಎಂಗಳಿಂದ ತುರ್ತು ಸಮಯದಲ್ಲಿ ಹಣವನ್ನು ಪಡೆಯಲು ಕಾರ್ಡ್ ಅನ್ನು ಬಳಸಬಹುದು. ಅಂತಹ ಎಲ್ಲಾ ಶುಲ್ಕಗಳಿಗೆ ವಹಿವಾಟು ಫೀಸನ್ನು ವಿಧಿಸಲಾಗುತ್ತದೆ ಮತ್ತು ಮುಂದಿನ ಹೇಳಿಕೆಯಲ್ಲಿ ಕಾರ್ಡ್‌ಧಾರಕರಿಗೆ ಬಿಲ್ ಮಾಡಲಾಗುತ್ತದೆ.ದೇಶೀಯ ಎಸ್‌ಬಿಐ ಎಟಿಎಂ/ಕ್ಯಾಶ್‌ಪಾಯಿಂಟ್‌ಗಳಲ್ಲಿ 2.5% ಅಥವಾ ರೂ.450 ವರೆಗೆ ಯಾವುದು ಹೆಚ್ಚಿರುತ್ತದೆಯೋ, ಮತ್ತು ಇತರ ದೇಶೀಯ ಎಟಿಎಂಗಳಲ್ಲಿ 450 ಅಥವಾ 2.5% ವರೆಗೆ ಯಾವುದು ಹೆಚ್ಚಿರುತ್ತದೆಯೋ, ಮತ್ತು ಅಂತರರಾಷ್ಟ್ರೀಯ ಎಟಿಎಂಗಳಲ್ಲಿ 3% ಅಥವಾ ರೂ.450 ವರೆಗೆ, ಯಾವುದು ಹೆಚ್ಚಿರುತ್ತದೆಯೋ ಆ ವಹಿವಾಟು ಶುಲ್ಕವನ್ನು ವಿಧಿಸಲಾಗುವುದು. ವಹಿವಾಟು ಫೀಸು ಎಸ್‌ಬಿಐ ಕಾರ್ಡ್ಸ್ ಮತ್ತು ಪೇಮೆಂಟ್ ಸರ್ವೀಸಸ್ ಲಿಮಿಟೆಡ್ (ಹಿಂದೆ ಇದನ್ನು ಎಸ್‌ಬಿಐ ಕಾರ್ಡ್ಸ್ ಮತ್ತು ಪೇಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)ನ ವಿವೇಚನೆಯಿಂದ ಬದಲಾವಣೆಗೆ ಒಳಪಟ್ಟಿರುತ್ತದೆ. ಎಲ್ಲಾ ನಗದು ಮುಂಗಡಗಳು ಹಿಂಪಡೆದ ದಿನಾಂಕದಿಂದ ಇತ್ಯರ್ಥದ ದಿನಾಂಕದವರೆಗೆ ಸೇವಾ ಶುಲ್ಕವನ್ನು ಸಹ ಹೊಂದಿರುತ್ತವೆ. ಪ್ರಸ್ತುತ ಸೇವಾ ಶುಲ್ಕವು ತಿಂಗಳಿಗೆ 3.35% ವರೆಗೆ [ವರ್ಷಕ್ಕೆ 40.2%] ಇರುತ್ತದೆ ಮತ್ತು ಎಸ್‌ಬಿಐಸಿಪಿಎಸ್‌ಎಲ್‌ನ ವಿವೇಚನೆಯಿಂದ ಬದಲಾವಣೆಗೆ ಒಳಪಟ್ಟಿರುತ್ತದೆ.

C. ನಗದು ಪಾವತಿ ಫೀಸು

ಕಾರ್ಡ್‌ಧಾರಕರು ಯಾವುದೇ ಎಸ್‌ಬಿಐ ಶಾಖೆಗೆ ಭೇಟಿ ನೀಡಬಹುದು ಮತ್ತು ಕಾರ್ಪೋರೇಟ್ ಕಾರ್ಡ್ ಸಂಖ್ಯೆ ಮತ್ತು ಮೊತ್ತವನ್ನು ಪೇ-ಇನ್ ಸ್ಲಿಪ್‌ನಲ್ಲಿ ನಮೂದಿಸಿ ಮತ್ತು ಅದನ್ನು ಬ್ರಾಂಚ್ ಕೌಂಟರ್‌ನಲ್ಲಿ ಠೇವಣಿ ಇಡುವ ಮೂಲಕ ಎಸ್‌ಬಿಐ ಕಾರ್ಡ್ ಬಾಕಿಗಳನ್ನು ಪಾವತಿಸಬಹುದು. ನಿಮ್ಮ ಬಿಲ್ ಪಾವತಿಸಿದ ನಂತರ ತ್ವರಿತ ಪಾವತಿ ಸ್ವೀಕೃತಿ ರಶೀದಿಯನ್ನು ಒದಗಿಸಲಾಗುತ್ತದೆ. ಈ ಸೇವೆಯು ರೂ. 100 + ಅನ್ವಯವಾಗುವ ತೆರಿಗೆಗಳಲ್ಲಿ ಲಭ್ಯವಿದೆ.

D. ಶುಲ್‌ಕಗಳು

i. ಕಾರ್ಡ್‌ಧಾರಕರಿಗೆ ಎಸ್‌ಬಿಐಸಿಪಿಎಸ್‌ಎಲ್ ಒದಗಿಸುವ ನಿರ್ದಿಷ್ಟ ಸೇವೆಗಳಿಗೆ ಅಥವಾ ಕಾರ್ಡ್‌ಧಾರಕರು ತಮ್ಮ ಕಾರ್ಡ್ ಖಾತೆಗೆ ಸಂಬಂಧಿಸಿದಂತೆ ಮಾಡುವ ಡೀಫಾಲ್ಟ್‌ಗಳಿಗಾಗಿ, ಕಾಲಕಾಲಕ್ಕೆ ಅನ್ವಯವಾಗುವಂತಹ ಫೀಸುಗಳು ಮತ್ತು ಶುಲ್ಕಗಳನ್ನು ಕಾರ್ಡ್‌ಧಾರಕರಿಂದ ಪಾವತಿಸಲಾಗುವುದು.

ii. ಕಾಲಕಾಲಕ್ಕೆ ಯಾವುದೇ ಫೀಸುಗಳು ಅಥವಾ ಶುಲ್ಕಗಳನ್ನು ಬದಲಾಯಿಸುವ ಅಥವಾ ಸೂಕ್ತವೆಂದು ಪರಿಗಣಿಸಬಹುದಾದ, ಯಾವುದೇ ಹೊಸ ಫೀಸುಗಳು ಅಥವಾ ಶುಲ್ಕಗಳನ್ನು, ಕಾರ್ಡ್‌ಧಾರಕರಿಗೆ ಸರಿಯಾದ ಮಾಹಿತಿಯೊಂದಿಗೆ, ಪರಿಚಯಿಸುವ ಹಕ್ಕನ್ನು ಎಸ್‌ಬಿಐಸಿಪಿಎಸ್‌ಎಲ್ ಉಳಿಸಿಕೊಂಡಿದೆ.

E. ಬಡ್ಡಿರಹಿತ ಹೆಚ್ಚುವರಿ ಗಡುವು ಅವಧಿ

ವ್ಯಾಪಾರಿ ಕ್ಲೈಮುಗಳ ಸಲ್ಲಿಕೆಗೆ ಒಳಪಟ್ಟಂತೆ ಬಡ್ಡಿರಹಿತ ಕ್ರೆಡಿಟ್ ಅವಧಿಯು 20 ರಿಂದ 50 ದಿನಗಳವರೆಗೆ ಇರಬಹುದು. ಆದಾಗ್ಯೂ, ಒಂದು ವೇಳೆ ಹಿಂದಿನ ತಿಂಗಳ ಬ್ಯಾಲೆನ್ಸ್ ಮೊತ್ತವನ್ನು ಪೂರ್ಣವಾಗಿ ಪಾವತಿಸಿರದಿದ್ದರೆ ಅಥವಾ ಕಾರ್ಡ್‌ಧಾರಕರು ಯಾವುದೇ ಎಟಿಎಂ/ಕ್ಯಾಶ್ ಪಾಯಿಂಟ್‌ನಿಂದ ಹಣವನ್ನು ಪಡೆದುಕೊಂಡಿದ್ದರೆ, ಇದು ಅನ್ವಯಿಸುವುದಿಲ್ಲ

F. ಹಣಕಾಸು ಶುಲ್ಕಗಳು (ಸೇವಾ ಶುಲ್ಕಗಳು)

ಕಾರ್ಡ್‌ಧಾರಕರು ತಮ್ಮ ಬ್ಯಾಲೆನ್ಸ್ ಮೊತ್ತವನ್ನು ಪೂರ್ಣವಾಗಿ ಪಾವತಿಸದೇ ಇರಲು ನಿರ್ಧರಿಸಿದ ಸಂದರ್ಭದಲ್ಲಿ ಮತ್ತು ಕಾರ್ಡ್‌ಧಾರಕರು ತೆಗೆದುಕೊಂಡ ಎಲ್ಲಾ ನಗದು ಮುಂಗಡಗಳ ಮೇಲೆ, ಅವರು ಮರುಪಾವತಿ ಮಾಡುವವರೆಗೂ, ವಹಿವಾಟಿನ ದಿನಾಂಕದಿಂದ ಎಲ್ಲಾ ವಹಿವಾಟುಗಳ ಮಾಸಿಕ ಶೇಕಡಾವಾರು ದರದಲ್ಲಿ ಹಣಕಾಸು ಶುಲ್ಕವನ್ನು ಪಾವತಿಸಬೇಕಾಗುವುದು.

ಒಂದು ವೇಳೆ ಕಾರ್ಪೋರೇಟ್ ಅಥವಾ ಕಾರ್ಡುಧಾರಕರು ಪಾವತಿ ಬಾಕಿ ದಿನಾಂಕದ ಮೊದಲು (ಪಿಡಿಡಿ) ಒಟ್ಟು ಮೊತ್ತದ (ಟಿಎಡಿ) ಭಾಗವನ್ನು ಭಾಗಶಃ ಪಾವತಿಸಿದ್ದರೆ ಅಥವಾ ಪಾವತಿಸದೇ ಇದ್ದರೆ; ಅಂದರೆ, ಗ್ರಾಹಕನು ಹಿಂದಿನ ತಿಂಗಳುಗಳಿಂದ ಬಾಕಿ ಉಳಿದಿರುವ ಬ್ಯಾಲೆನ್ಸ್ ಅನ್ನು ಹೊಂದಿದ್ದು, ಪ್ರಸ್ತುತ ತಿಂಗಳಲ್ಲಿ, ಪಾವತಿ ಬಾಕಿ ದಿನಾಂಕಕ್ಕೂ ಮೊದಲು, ಒಟ್ಟು ಮೊತ್ತ ಬಾಕಿಯ ಸಂಪೂರ್ಣ ಪಾವತಿಯನ್ನು ಮಾಡಿದರೆ, ನಂತರ ಪಾವತಿ ದಿನಾಂಕದವರೆಗೆ ಮುಕ್ತಾಯದ ಬ್ಯಾಲೆನ್ಸ್ ಮೇಲೆ ಹಣಕಾಸು ಶುಲ್ಕವನ್ನು ವಿಧಿಸಲಾಗುತ್ತದೆ.

ಕಾರ್ಡ್ ಬಡ್ಡಿದರವು ಡೈನಾಮಿಕ್ ಆಗಿದ್ದು, ಕಾರ್ಡ್‌ಧಾರಕರ ಬಳಕೆ ಮತ್ತು ಪಾವತಿ ಮಾದರಿಗಳನ್ನು ಆಧರಿಸಿರುತ್ತದೆ ಹಾಗೂ ಆವರ್ತಕ ಪರಿಶೀಲನೆಗೆ ಒಳಪಟ್ಟಿರುತ್ತದೆ. ವಹಿವಾಟಿನ ದಿನಾಂಕದಿಂದ ಹಣಕಾಸು ಶುಲ್ಕಗಳ ದರವು ತಿಂಗಳಿಗೆ ಗರಿಷ್ಠ 3.35% [ವರ್ಷಕ್ಕೆ 40.2%] ಕ್ಕೆ ಹೆಚ್ಚಾಗಬಹುದು ಮತ್ತು ಇದು ಎಸ್‌ಬಿಐಸಿಪಿಎಸ್‌ಎಲ್‌ನ ವಿವೇಚನೆಯಿಂದ ಬದಲಾವಣೆಗೆ ಒಳಪಟ್ಟಿರುತ್ತದೆ. ಪಾವತಿಸಬೇಕಾದರೆ ಹಣಕಾಸು ಶುಲ್ಕಗಳು ಅನ್ವಯವಾಗುವ ತೆರಿಗೆಗಳನ್ನು ವಿಧಿಸುತ್ತವೆ ಮತ್ತು ಕಾರ್ಡ್‌ನಲ್ಲಿ ಬಾಕಿ ಇರುವ ಹಣವನ್ನು ಪೂರ್ಣವಾಗಿ ಪಾವತಿಸುವವರೆಗೆ ಕಾರ್ಡ್‌ಧಾರಕ ಖಾತೆಗೆ ಡೆಬಿಟ್ ಮಾಡಲಾಗುತ್ತದೆ. ಕಾರ್ಡ್‌ಧಾರಕರು ತಮ್ಮ ಬ್ಯಾಲೆನ್ಸ್ ಮೊತ್ತವನ್ನು ಪಾವತಿಸಬೇಕಾದ ದಿನಾಂಕದೊಳಗೆ ಪೂರ್ಣವಾಗಿ ಪಾವತಿಸದಿರಲು ನಿರ್ಧರಿಸಿದಲ್ಲಿ ಎಲ್ಲಾ ವಹಿವಾಟುಗಳಿಗೆ ಮತ್ತು ಕಾರ್ಡ್‌ಧಾರಕರು ತೆಗೆದುಕೊಳ್ಳುವ ಎಲ್ಲಾ ನಗದು ಮುಂಗಡಗಳ ಮೇಲೆ, ಅನ್ವಯವಾಗುವ ತೆರಿಗೆಗಳನ್ನು ಹೊರತುಪಡಿಸಿ, ತಲಾ ರೂ. 25 ರಷ್ಟು ಕನಿಷ್ಠ ಹಣಕಾಸು ಶುಲ್ಕವನ್ನು ವಿಧಿಸಲಾಗುತ್ತದೆ.

a) ನಗದು ಮುಂಗಡಗಳ ಮೇಲಿನ ಹಣಕಾಸು ಶುಲ್ಕಗಳು (ಅನ್ವಯವಾಗಿದ್ದರೆ) ವಹಿವಾಟಿನ ದಿನಾಂಕದಿಂದ ಪಾವತಿಯನ್ನು ಪೂರ್ಣವಾಗಿ ಮಾಡುವವರೆಗೆ ಅನ್ವಯಿಸುತ್ತದೆ

ಉದಾಹರಣೆ 1 ಕಾರ್ಡ್ ಹೇಳಿಕೆ ದಿನಾಂಕ - ಪ್ರತಿ ತಿಂಗಳ 2ನೇ ತಾರೀಕು

3, ಮಾರ್ಚ್ 17 - 2, ಏಪ್ರಿಲ್ 17 ರ ನಡುವಿನ ವಹಿವಾಟುಗಳು ಈ ಕೆಳಗಿನಂತಿವೆ:

1. ರೂ.5000 ಚಿಲ್ಲರೆ ಖರೀದಿ - 10ನೇ ಮಾರ್ಚ್ 17 ರಂದು

2. ರೂ.7000 ನಗದು ಹಿಂಪಡೆಯುವಿಕೆ (ಅನ್ವಯಿಸಿದರೆ) - 30, ಮಾರ್ಚ್ 17 ರಂದು

2, ಮಾರ್ಚ್ 17 ರ ಹೇಳಿಕೆಯಿಂದ ಯಾವುದೇ ಹಿಂದಿನ ಬ್ಯಾಲೆನ್ಸ್ ಉಳಿದಿಲ್ಲವೆಂದು ಊಹಿಸಿದರೆ, ಕಾರ್ಡ್‌ಧಾರಕರು ತಮ್ಮ 2, ಏಪ್ರಿಲ್ 17 ರ ಹೇಳಿಕೆಯಲ್ಲಿ, ರೂ. 7,000 ನಗದು ಹಿಂಪಡೆಯುವಿಕೆಗೆ ಅನ್ವಯವಾಗುವ ದರದಲ್ಲಿ 3 ದಿನಗಳ ಹಣಕಾಸು ಶುಲ್ಕದೊಂದಿಗೆ ರೂ. 12,000 ವಹಿವಾಟುಗಳನ್ನು ತೋರಿಸುವುದನ್ನು ಪಡೆಯುತ್ತಾರೆ. ಕಾರ್ಡ್‌ಧಾರಕರು 22, ಏಪ್ರಿಲ್ 17 ರೊಳಗೆ, ಅಂದರೆ ಹೇಳಿಕೆ ದಿನಾಂಕದಿಂದ 20 ದಿನಗಳೊಳಗೆ, ಬಾಕಿ ಇರುವ ಮೊತ್ತವನ್ನು ಪಾವತಿಸಬೇಕಾಗುತ್ತದೆ. ಪಾವತಿ ಬಾಕಿ ದಿನಾಂಕದವರೆಗೆ, ಕಾರ್ಡ್‌ಧಾರಕರ ಎಸ್‌ಬಿಐ ಕಾರ್ಪೋರೇಟ್ ಕಾರ್ಡ್ ಖಾತೆಯ ಎಲ್ಲಾ ಪಾವತಿಗಳನ್ನು ಪೂರ್ಣವಾಗಿ (ಒಟ್ಟು ಮೊತ್ತ ಬಾಕಿ) ಇತ್ಯರ್ಥಪಡಿಸಬೇಕು ಎಂಬುದನ್ನು ದಯವಿಟ್ಟು ಗಮನಿಸಿ. ಪಾವತಿಯನ್ನು ಮೊದಲು ತೆರಿಗೆಗಳಿಗೆ, ಅದರ ನಂತರ ಫೀಸುಗಳು ಮತ್ತು ಇತರ ಶುಲ್ಕಗಳು, ಬಡ್ಡಿ ಶುಲ್ಕಗಳು, ಚಿಲ್ಲರೆ ಬಾಕಿ ಮತ್ತು ಕೊನೆಯಲ್ಲಿ ನಗದು ಬಾಕಿಗೆ (ಯಾವುದಾದರೂ ಇದ್ದರೆ) ಪಾವತಿಸಲಾಗುತ್ತದೆ.

a) ಹಿಂದಿನ ಹೇಳಿಕೆಯಿಂದ ಯಾವುದೇ ಹಿಂದಿನ ಬ್ಯಾಲೆನ್ಸ್ ಮೊತ್ತವನ್ನು ಮುಂದಕ್ಕೆ ಮುಂದುವರಿಸಿದ್ದಂತಹ ಸಂದರ್ಭದಲ್ಲಿ, ಹಿಂದಿನ ಹೇಳಿಕೆ ದಿನಾಂಕದಿಂದ ಹಣಕಾಸು ಶುಲ್ಕವನ್ನು ವಿಧಿಸಲಾಗುತ್ತದೆ (ಬಡ್ಡಿರಹಿತ ಬಾಕಿ ಉಳಿದಿರುವ ಚಿಲ್ಲರೆ ಬಾಕಿ ಮೊತ್ತವನ್ನು ಹೊರತುಪಡಿಸಿ, ಇದರಲ್ಲಿ ವಹಿವಾಟು ದಿನಾಂಕದಿಂದ ಹಣಕಾಸು ಶುಲ್ಕ ವಿಧಿಸಲಾಗುತ್ತದೆ).

b) ಬಾಕಿ ಇರುವ ಹೇಳಿಕೆಯು ನಗದು ಬ್ಯಾಲೆನ್ಸ್ ಅನ್ನು ಹೊಂದಿಲ್ಲದಿದ್ದರೆ ಮತ್ತು ಹಿಂದಿನ ಹೇಳಿಕೆಯಿಂದ ಮುಂದಕ್ಕೂ ಮುಂದುವರೆಸದಿದ್ದರೆ ಮತ್ತು ಹೇಳಿಕೆ ದಿನಾಂಕದಂದು ಬಾಕಿ ಇರುವ ಚಿಲ್ಲರೆ ಬ್ಯಾಲೆನ್ಸ್ ಹಣವನ್ನು ಪಾವತಿ ಬಾಕಿ ದಿನಾಂಕದವರೆಗೆ ಪೂರ್ಣವಾಗಿ ಪಾವತಿಸಿದರೆ, ಅಂತಹ ಬ್ಯಾಲೆನ್ಸ್ ಗಳಿಗೆ ಯಾವುದೇ ಹಣಕಾಸು ಶುಲ್ಕವನ್ನು ವಿಧಿಸಲಾಗುವುದಿಲ್ಲ.

ಉದಾಹರಣೆ 2 - ಕಾರ್ಡ್ ಹೇಳಿಕೆ ದಿನಾಂಕ - ಪ್ರತಿ ತಿಂಗಳ 2ನೇ ತಾರೀಕು.

3, ಜನವರಿ 17 - 2, ಫೆಬ್ರವರಿ 17 ರ ನಡುವಿನ ವಹಿವಾಟುಗಳು ಈ ಕೆಳಗಿನಂತಿವೆ:

1. ರೂ.10000 ಚಿಲ್ಲರೆ ಖರೀದಿ - 5ನೇ ಜನವರಿ 17 ರಂದು

2. ರೂ. 30000 ಆನ್‌ಲೈನ್ ಖರೀದಿ. - 15, ಜನವರಿ 17 ರಂದು

2, ಜನವರಿ 17 ರ ಹೇಳಿಕೆಯಿಂದ ಹಿಂದಿನ ಯಾವುದೇ ಬ್ಯಾಲೆನ್ಸ್ ಉಳಿದಿಲ್ಲವೆಂದು ಊಹಿಸಿದರೆ, ಕಾರ್ಡ್‌ಧಾರಕರು ರೂ. 40,000 ವಹಿವಾಟನ್ನು ತೋರಿಸುವ ತಮ್ಮ 2, ಫೆಬ್ರವರಿ 17 ರ ಹೇಳಿಕೆಯನ್ನು ಪಡೆಯುತ್ತಾರೆ. ಕಾರ್ಡ್‌ಧಾರಕರು 22 ಫೆಬ್ರವರಿ 17 ರೊಳಗೆ, ಅಂದರೆ ಹೇಳಿಕೆ ದಿನಾಂಕದಿಂದ 20 ದಿನಗಳೊಳಗೆ ಬಾಕಿ ಇರುವ ಮೊತ್ತವನ್ನು ಪಾವತಿಸಬೇಕಾಗುತ್ತದೆ. ಪಾವತಿಯನ್ನು ಮೊದಲು ತೆರಿಗೆಗಳಿಗೆ, ಅದರ ನಂತರ ಫೀಸುಗಳು ಮತ್ತು ಇತರ ಶುಲ್ಕಗಳು, ಬಡ್ಡಿ ಶುಲ್ಕಗಳು, ಚಿಲ್ಲರೆ ಬಾಕಿ ಮತ್ತು ಕೊನೆಯಲ್ಲಿ ನಗದು ಬಾಕಿಗೆ (ಯಾವುದಾದರೂ ಇದ್ದರೆ) ಪಾವತಿಸಲಾಗುತ್ತದೆ. ಹಿಂದಿನ ಹೇಳಿಕೆಯಿಂದ ಯಾವುದೇ ಹಿಂದಿನ ಬ್ಯಾಲೆನ್ಸ್ ಮೊತ್ತವನ್ನು ಮುಂದಕ್ಕೂ ಮುಂದುವರೆಸಿದ ಸಂದರ್ಭದಲ್ಲಿ, ಹಿಂದಿನ ಹೇಳಿಕೆ ದಿನಾಂಕದಿಂದ ಹಣಕಾಸು ಶುಲ್ಕವನ್ನು ವಿಧಿಸಲಾಗುತ್ತದೆ (ಬಡ್ಡಿರಹಿತ ಬಾಕಿ ಉಳಿದಿರುವ ಚಿಲ್ಲರೆ ಬಾಕಿ ಮೊತ್ತವನ್ನು ಹೊರತುಪಡಿಸಿ, ಇದರಲ್ಲಿ ವಹಿವಾಟು ದಿನಾಂಕದಿಂದ ಹಣಕಾಸು ಶುಲ್ಕ ವಿಧಿಸಲಾಗುತ್ತದೆ).

ಪ್ರತಿ ತಿಂಗಳು ಕನಿಷ್ಠ ಪಾವತಿಯನ್ನು ಮಾತ್ರ ಮಾಡುವುದರಿಂದ ಬಾಕಿ ಉಳಿದಿರುವ ಬ್ಯಾಲೆನ್ಸ್ ಮೇಲೆ ತರುವಾಯದ ಬಡ್ಡಿ ಪಾವತಿಯೊಂದಿಗೆ ಮರುಪಾವತಿಯು ವರ್ಷಗಳಿಗೆ ವಿಸ್ತರಿಸಲ್ಪಡುತ್ತದೆ.

ಉದಾಹರಣೆ 3: ಕಾರ್ಡ್ ಹೇಳಿಕೆ ದಿನಾಂಕ - ಪ್ರತಿ ತಿಂಗಳ 2ನೇ ತಾರೀಕು.

3, ಡಿಸೆಂಬರ್ 16 - 2, ಜನವರಿ 17 ರ ನಡುವಿನ ವಹಿವಾಟುಗಳು

1. ರೂ. 500 ಚಿಲ್ಲರೆ ಖರೀದಿ - 15ನೇ ಡಿಸೆಂಬರ್ 16 ರಂದು

2. ರೂ. 600 ಆನ್‌ಲೈನ್ ಖರೀದಿ - 20ನೇ ಡಿಸೆಂಬರ್ 16 ರಂದು

2, ಡಿಸೆಂಬರ್ 2016 ರ ಹೇಳಿಕೆಯಿಂದ ಹಿಂದಿನ ಯಾವುದೇ ಬ್ಯಾಲೆನ್ಸ್ ಉಳಿದಿಲ್ಲವೆಂದು ಊಹಿಸಿದರೆ, ಕಾರ್ಡ್‌ಧಾರಕರು ರೂ. 1100 ಒಟ್ಟು ಮೊತ್ತ ಬಾಕಿಯೊಂದಿಗೆ, ರೂ. 1100 ವಹಿವಾಟನ್ನು ತೋರಿಸುವ ತಮ್ಮ 2, ಜನವರಿ 17 ರ ಹೇಳಿಕೆಯನ್ನು ಪಡೆಯುತ್ತಾರೆ. ಕಾರ್ಡ್‌ಧಾರಕರು ಬಾಕಿ ಉಳಿದಿರುವ ಮೊತ್ತವನ್ನು 22, ಜನವರಿ '17 ರೊಳಗೆ, ಅಂದರೆ ಹೇಳಿಕೆ ದಿನಾಂಕದಿಂದ 20 ದಿನಗಳೊಳಗೆ, ಪಾವತಿ ಮಾಡಬೇಕಾಗಿದೆ.

ಕಾರ್ಡ್‌ಧಾರಕರು ರೂ.500 ರ ಭಾಗಶಃ ಪಾವತಿ ಮಾಡುತ್ತಾರೆಂದು ಊಹಿಸಿದರೆ, 22, ಜನವರಿ '17 ರಂದು, ಪರಿಣಾಮಕಾರಿ ದರದಲ್ಲಿ ಹಣಕಾಸು ಶುಲ್ಕವನ್ನು ವಿಧಿಸಲಾಗುತ್ತದೆ ಮತ್ತು ಒಟ್ಟು ಬಾಕಿ ಮೊತ್ತಕ್ಕೆ ಸೇರಿಸಲಾಗುತ್ತದೆ. 3.35% p.m. ನ ಪರಿಣಾಮಕಾರಿ ದರವನ್ನು ಪರಿಗಣಿಸಲಾಗುತ್ತದೆ, ಹಣಕಾಸು ಶುಲ್ಕ ಲೆಕ್ಕಾಚಾರವನ್ನು ಈ ಕೆಳಗಿನಂತೆ ಮಾಡಲಾಗುತ್ತದೆ:

39 ದಿನಗಳಿಗೆ (15, ಡಿಸೆಂಬರ್ ನಿಂದ 22, ಜನವರಿ) ರೂ.500 ಬ್ಯಾಲೆನ್ಸ್ ಮೇಲೆ:

(3.35*12) * (39/365) *500/100 = ರೂ. 21.48

34 ದಿನಗಳಿಗೆ (20, ಡಿಸೆಂಬರ್ ನಿಂದ 22, ಜನವರಿ) ರೂ.600 ಬ್ಯಾಲೆನ್ಸ್ ಮೇಲೆ:

(3.35*12) * (34/365) *600/100 = ರೂ 22.47

10 ದಿನಗಳಿಗೆ (22, ಜನವರಿ ನಿಂದ 2, ಫೆಬ್ರವರಿ) ರೂ.600 ಬ್ಯಾಲೆನ್ಸ್ ಮೇಲೆ:

(3.35*12) * (10/365) *600/100 = ರೂ. 6.61

ವಿಧಿಸಲಾದ ಒಟ್ಟು ಬಡ್ಡಿ = ರೂ. 50.56

3, ಫೆಬ್ರವರಿ 17 - 2, ಮಾರ್ಚ್ 17 ರ ನಡುವಿನ ವಹಿವಾಟುಗಳು

1. ರೂ. 650.56 ಆರಂಭ ಬಾಕಿ - 3, ಫೆಬ್ರವರಿ 17 ರಂದು

2. ರೂ.1000 ಚಿಲ್ಲರೆ ಖರೀದಿ - 5ನೇ ಫೆಬ್ರವರಿ 17 ರಂದು

3. ರೂ. 3000 ಆನ್‌ಲೈನ್ ಖರೀದಿ - 15ನೇ ಫೆಬ್ರವರಿ 17 ರಂದು

2, ಫೆಬ್ರವರಿ '17 ಹೇಳಿಕೆಯಿಂದ ರೂ.650.46 ಗಳ ಹಿಂದಿನ ಬ್ಯಾಲೆನ್ಸ್ ಮೊತ್ತವನ್ನು ಊಹಿಸಿದರೆ, ಕಾರ್ಡ್‌ಧಾರಕರು ಬಾಕಿ ಉಳಿದಿರುವ ಮೊತ್ತವನ್ನು ಫೆಬ್ರವರಿ 22, '17 ರೊಳಗೆ, ಅಂದರೆ ಹೇಳಿಕೆ ದಿನಾಂಕದಿಂದ 20 ದಿನಗಳೊಳಗೆ ಪಾವತಿ ಮಾಡಬೇಕಾಗುತ್ತದೆ.

ಕಾರ್ಡ್‌ಧಾರಕರು ಫೆಬ್ರವರಿ 15 ರೊಳಗೆ, ಅಂದರೆ ಪಾವತಿ ದಿನಾಂಕದೊಳಗೆ ಸಂಪೂರ್ಣ ಪಾವತಿಯನ್ನು ಮಾಡುತ್ತಾರೆ ಎಂದು ಊಹಿಸಿ. 3.35% p.m. ರಂತೆ ಪರಿಣಾಮಕಾರಿ ದರವನ್ನು ಪರಿಗಣಿಸಿ, ಹಣಕಾಸು ಶುಲ್ಕ ಲೆಕ್ಕಾಚಾರವನ್ನು ಈ ಕೆಳಗಿನಂತೆ ಮಾಡಲಾಗುತ್ತದೆ:

12 ದಿನಗಳಿಗೆ (3 ಫೆಬ್ರವರಿ - 15 ಫೆಬ್ರವರಿ) ರೂ.650.56 ಬ್ಯಾಲೆನ್ಸ್ ಮೇಲೆ:

(3.35*12) *(12/365) * 650.56/100 = ರೂ. 8.60

ವಿಧಿಸಲಾದ ಒಟ್ಟು ಬಡ್ಡಿ = ರೂ. 8.60

ಬಾಕಿ ಉಳಿದಿರುವ ಖರೀದಿ ಮೊತ್ತ, ಬಡ್ಡಿ ಶುಲ್ಕಗಳು, ಫೀಸುಗಳು ಮತ್ತು ಶುಲ್ಕಗಳು, ಯಾವುದಾದರೂ ಇದ್ದರೆ, ಮತ್ತು ಅನ್ವಯವಾಗುವ ಎಲ್ಲಾ ತೆರಿಗೆಗಳು, ನೀಡಬೇಕಾದ ಒಟ್ಟು ಮೊತ್ತವಾಗಿ, ಮಾರ್ಚ್ 2 ನೇ ತಾರೀಕಿನ ಹೇಳಿಕೆಯಲ್ಲಿ ಪ್ರತಿಫಲಿಸುತ್ತವೆ

G. ವಿಳಂಬ ಪಾವತಿ ಶುಲ್ಕಗಳು

ಪಾವತಿ ಬಾಕಿ ದಿನಾಂಕದ ವೇಳೆಗೆ ಒಟ್ಟು ಮೊತ್ತವನ್ನು ಪಾವತಿಸದಿದ್ದರೆ ವಿಳಂಬ ಪಾವತಿ ಶುಲ್ಕಗಳು ಅನ್ವಯವಾಗುತ್ತವೆ.

ರೂ.0 ರಿಂದ ರೂ. 200 ರವರೆಗೆ ಬಾಕಿ ಇರುವ ಒಟ್ಟು ಮೊತ್ತಕ್ಕೆ ಇರುವುದಿಲ್ಲ;

ರೂ.200 ಕ್ಕಿಂತ ಹೆಚ್ಚಿನ ಮತ್ತು ರೂ.500 ವರೆಗಿನ ಒಟ್ಟು ಬಾಕಿ ಮೊತ್ತಕ್ಕೆ ರೂ.100;

ರೂ.500 ಕ್ಕಿಂತ ಹೆಚ್ಚಿನ ಮತ್ತು ರೂ.1000 ರೂ.ವರೆಗಿನ ಒಟ್ಟು ಬಾಕಿ ಮೊತ್ತಕ್ಕೆ ರೂ.400;

ರೂ.1000 ಕ್ಕಿಂತ ಹೆಚ್ಚಿನ ಮತ್ತು ರೂ.10,000 ವರೆಗಿನ ಒಟ್ಟು ಬಾಕಿ ಮೊತ್ತಕ್ಕೆ ರೂ. 500;

ರೂ.10,000 ಕ್ಕಿಂತ ಹೆಚ್ಚಿನ ಒಟ್ಟು ಬಾಕಿ ಮೊತ್ತಕ್ಕೆ ರೂ. 750

ಉದಾಹರಣೆ 1 - ಕಾರ್ಡ್ ಹೇಳಿಕೆ ದಿನಾಂಕ - ಪ್ರತಿ ತಿಂಗಳ 2ನೇ ತಾರೀಕು.

3, ಫೆಬ್ರವರಿ 17 ರಿಂದ 2, ಮಾರ್ಚ್ 17 ರವರೆಗಿನ ವಹಿವಾಟುಗಳು ಹೀಗಿವೆ:

1. ರೂ.2000 ಚಿಲ್ಲರೆ ಖರೀದಿ - 8ನೇ ಫೆಬ್ರವರಿ 17 ರಂದು
2. ರೂ.2500 ಆನ್‌ಲೈನ್ ಖರೀದಿ - 19, ಫೆಬ್ರವರಿ 17 ರಂದು

2, ಫೆಬ್ರವರಿ 17 ರ ಹೇಳಿಕೆಯಿಂದ ಯಾವುದೇ ಹಿಂದಿನ ಬ್ಯಾಲೆನ್ಸ್ ಉಳಿದಿಲ್ಲವೆಂದು ಊಹಿಸಿದರೆ, ಕಾರ್ಡ್‌ಧಾರಕರು ರೂ. 4500 ವಹಿವಾಟನ್ನು ತೋರಿಸುವ 2, ಮಾರ್ಚ್ ಹೇಳಿಕೆಯನ್ನು ಪಡೆಯುತ್ತಾರೆ. ಕಾರ್ಡ್‌ಧಾರಕರು ಬಾಕಿ ಇರುವ ಮೊತ್ತವನ್ನು 22, ಮಾರ್ಚ್ 17 ರೊಳಗೆ, ಅಂದರೆ ಹೇಳಿಕೆ ದಿನಾಂಕದಿಂದ 20 ದಿನಗಳೊಳಗೆ, ಪಾವತಿಸಬೇಕಾಗುತ್ತದೆ. ಕಾರ್ಡ್‌ಧಾರಕರು ಪಾವತಿ ಬಾಕಿ ದಿನಾಂಕದವರೆಗೆ ಪೂರ್ಣ ಪಾವತಿಯನ್ನು (ಅಂದರೆ ಒಟ್ಟು ಮೊತ್ತ ಬಾಕಿ) ಮಾಡದಿದ್ದರೆ, ಅವರಿಗೆ ರೂ.500 (ರೂ. 1,001 ರಿಂದ - ರೂ. 10,000 ವರೆಗಿನ ಒಟ್ಟು ಮೊತ್ತ ಬಾಕಿಗೆ ರೂ. 500) ವಿಳಂಬ ಪಾವತಿ ಶುಲ್ಕವನ್ನು ವಿಧಿಸಲಾಗುತ್ತದೆ.

H. ಹೆಚ್ಚುವರಿ ಮಿತಿ ಶುಲ್ಕಗಳು - ಕಾರ್ಪೋರೇಟ್ ಕಾರ್ಡ್‌ಗಳಿಗೆ ಅನ್ವಯಿಸುವುದಿಲ್ಲ

I. ಪಾವತಿ ಅಸ್ವೀಕೃತಿ ಫೀಸು

ಪಾವತಿ ಅಸ್ವೀಕೃತಿಯ ಸಂದರ್ಭದಲ್ಲಿ, ಕಾರ್ಪೋರೇಟ್ ಕಾರ್ಡ್‌ಧಾರಕರಿಗೆ, ಕನಿಷ್ಠ ರೂ.350 ರಂತೆ, ಪಾವತಿ ಮೊತ್ತದ 2% ಪಾವತಿ ಅಸ್ವೀಕೃತಿ ಶುಲ್ಕವನ್ನು ವಿಧಿಸಲಾಗುತ್ತದೆ.

J. ಇತರ ಶುಲ್ಕಗಳು (ಅನ್ವಯಿಸಿದಲ್ಲಿ):

- ಕಾರ್ಡ್ ಬದಲಿ ಫೀಸು: ರೂ.100/- - ರೂ. 250/-
- ಚೆಕ್ ಪಾವತಿ ಫೀಸು: ರೂ.100
- ಚೆಕ್ ಪಿಕ್ ಅಪ್ ಫೀಸು: ರೂ.90/-
- ಹೇಳಿಕೆ ಮರುಪಡೆಯುವಿಕೆ ಫೀಸು: ಇಲ್ಲ

· ವಿದೇಶಿ ಕರೆನ್ಸಿ ವಹಿವಾಟು ಶುಲ್ಕ: 3.5% ವರೆಗೆ ವಿದೇಶಿ ಕರೆನ್ಸಿ ವಹಿವಾಟನ್ನು ಭಾರತೀಯ ರೂಪಾಯಿಯಾಗಿ ಪರಿವರ್ತಿಸಲು ಬಳಸುವ ವಿನಿಮಯ ದರವನ್ನು ವೀಸಾ/ಮಾಸ್ಟರ್‌ಕಾರ್ಡ್, ಸಂದರ್ಭವಿದ್ದಂತೆ, ಎಸ್‌ಬಿಐ ಕಾರ್ಡ್‌ನೊಂದಿಗೆ ವಹಿವಾಟು ಇತ್ಯರ್ಥವಾದ ದಿನಾಂಕದಂದು, ಇದು ವ್ಯವಹಾರ ಮಾಡಿದ ಅದೇ ದಿನಾಂಕವಾಗದಿರಬಹುದು, ಅವು ನಿಯಂತ್ರಿಸುವ ವಿನಿಮಯ ದರಗಳ ಆಧಾರದ ಮೇಲೆ, ನಿರ್ಧರಿಸುತ್ತವೆ. ವೀಸಾ/ಮಾಸ್ಟರ್‌ಕಾರ್ಡ್ ಹಂಚಿಕೊಂಡ ಭಾರತೀಯ ರೂಪಾಯಿಯಾಗಿ ಪರಿವರ್ತಿತವಾದ ಮೊತ್ತದ ಮೇಲೆ ವಿದೇಶಿ ಕರೆನ್ಸಿ ವಹಿವಾಟು ಶುಲ್ಕವನ್ನು ಅನ್ವಯಿಸಲಾಗುತ್ತದೆ.

2. ಮಿತಿಗಳು

ಕಾರ್ಪೋರೇಟ್ ಕಾರ್ಡ್ ಪ್ರೋಗ್ರಾಂ ಮ್ಯಾನೇಜರ್‌ನಿಂದ ಪಡೆದ ಸೂಚನೆಗಳ ಆಧಾರದ ಮೇಲೆ ಕ್ರೆಡಿಟ್ ಮಿತಿ ಮತ್ತು ನಗದು ಮಿತಿಯನ್ನು (ಅನ್ವಯಿಸಿದಲ್ಲಿ) ಕಾರ್ಡ್‌ಧಾರಕರಿಗೆ ನಿಗದಿಪಡಿಸಲಾಗುತ್ತದೆ. ಕಾರ್ಡ್ ವಿತರಣೆಯ ಸಮಯದಲ್ಲಿ ಈ ಮಿತಿಗಳನ್ನು ಕಾರ್ಡ್‌ಧಾರಕರಿಗೆ ತಿಳಿಸಲಾಗುತ್ತದೆ. ಕ್ರೆಡಿಟ್ ಮಿತಿ ಮತ್ತು ನಗದು ಮಿತಿಗಳನ್ನು (ಅನ್ವಯಿಸಿದಲ್ಲಿ) ಪ್ರತಿ ಹೇಳಿಕೆಯಲ್ಲಿ ಕಾರ್ಡ್‌ಧಾರಕರಿಗೆ ತಿಳಿಸಲಾಗುತ್ತದೆ. ಹೇಳಿಕೆ ರಚನೆಯ ಸಮಯದಲ್ಲಿ ಲಭ್ಯವಿರುವ ಕ್ರೆಡಿಟ್ ಮಿತಿಯನ್ನು (ಅಂದರೆ ಬಳಕೆಗೆ ಲಭ್ಯವಿರುವ ಕ್ರೆಡಿಟ್ ಮಿತಿ) ಹೇಳಿಕೆಯ ಒಂದು ಭಾಗವಾಗಿ ಒದಗಿಸಲಾಗುತ್ತದೆ.

ಸಾಂಸ್ಥಿಕ ಮಟ್ಟದ ಮಿತಿಯನ್ನು ಎಸ್‌ಬಿಐಸಿಪಿಎಸ್‌ಎಲ್ ನಿಯತಕಾಲಿಕವಾಗಿ ಪರಿಶೀಲಿಸಬಹುದು, ಮತ್ತು ಆಂತರಿಕ ಮಾನದಂಡಗಳು ಅಥವಾ ಕಾರ್ಪೋರೇಟ್ ಕಾರ್ಡ್ ಪ್ರೋಗ್ರಾಂ ಮ್ಯಾನೇಜರ್‌ನಿಂದ ಪಡೆದ ಆಧಾರ ವಿನಂತಿಯ ಆಧಾರದ ಮೇಲೆ ಅದನ್ನು ಹೆಚ್ಚಿಸಬಹುದು ಅಥವಾ ಕಡಿಮೆ ಮಾಡಬಹುದು. ಅಂತಹ ಯಾವುದೇ ಬದಲಾವಣೆಗಳು ಕಾರ್ಡ್‌ಧಾರಕರ ಮಿತಿಯ ಮೇಲೂ ಪರಿಣಾಮ ಬೀರಬಹುದು ಮತ್ತು ಅದನ್ನು ಕಾರ್ಪೋರೇಟ್ ಕಾರ್ಡ್ ಪ್ರೋಗ್ರಾಂ ಮ್ಯಾನೇಜರ್‌ಗೆ ತಿಳಿಸಲಾಗುವುದು, ಅವರು ಈ ಮಾಹಿತಿಯನ್ನು ಆಯಾ ಕಾರ್ಡ್‌ಧಾರಕರಿಗೆ ತಿಳಿಸಬಹುದು. ತಮ್ಮ ಸಾಲದ ಮಿತಿಯನ್ನು ಹೆಚ್ಚಿಸಲು ಬಯಸುವ ಕಾರ್ಡ್‌ಧಾರಕರು ಎಸ್‌ಬಿಐಸಿಪಿಎಸ್‌ಎಲ್‌ಗೆ ಲಿಖಿತವಾಗಿ ತಮ್ಮ ಆದಾಯವನ್ನು ಘೋಷಿಸುವ ಹಣಕಾಸು ದಾಖಲೆಗಳನ್ನು ಒದಗಿಸುವ ಮೂಲಕ ಅದನ್ನು ಮಾಡಬಹುದು. ಆದಾಗ್ಯೂ, ಎಸ್‌ಬಿಐಸಿಪಿಎಸ್‌ಎಲ್ ತನ್ನ ಸ್ವಂತ ವಿವೇಚನೆಯಿಂದ ಮತ್ತು ಸ್ವೀಕರಿಸಿದ ವಿನಂತಿ ಮತ್ತು ಕಾರ್ಪೋರೇಟ್ ಕಾರ್ಡ್ ಪ್ರೋಗ್ರಾಂ ಮ್ಯಾನೇಜರ್‌ರವರ ಅನುಮೋದನೆಯ ಆಧಾರದ ಮೇಲೆ, ಕಾರ್ಡ್‌ಧಾರಕರ ಕ್ರೆಡಿಟ್ ಮಿತಿಯನ್ನು ಹೆಚ್ಚಿಸಬಹುದು.

3. ಬಿಲ್ಲಿಂಗ್ ಮತ್ತು ಹೇಳಿಕೆ

a) ಎಸ್‌ಬಿಐಸಿಪಿಎಸ್‌ಎಲ್ ಕಾರ್ಡ್‌ಧಾರಕರಿಗೆ ಮಾಸಿಕ ಹೇಳಿಕೆಯನ್ನು ಕಳುಹಿಸುತ್ತದೆ ಮತ್ತು ಕೊನೆಯ ಹೇಳಿಕೆಯಿಂದ, ಈ ಅವಧಿಯಲ್ಲಿ ಕಾರ್ಡ್ ಸಕ್ರಿಯವಾಗಿದ್ದರೆ, ಕಾರ್ಡ್‌ಧಾರಕರ ಖಾತೆಗೆ ಕ್ರೆಡಿಟ್ ಮಾಡಲಾದ ಪಾವತಿಗಳನ್ನು ಮತ್ತು ಡೆಬಿಟ್ ಮಾಡಲಾದ ವಹಿವಾಟುಗಳನ್ನು ತೋರಿಸುತ್ತದೆ. ಪೂರ್ವ ನಿರ್ಧಾರಿತ ದಿನಾಂಕದಂದು ಎಸ್‌ಬಿಐಸಿಪಿಎಸ್‌ಎಲ್ ದಾಖಲೆಯಲ್ಲಿರುವ ಇಮೇಲ್ ಐಡಿಗೆ ಹೇಳಿಕೆಯನ್ನು ಇಮೇಲ್ ಮೂಲಕ ಕಳುಹಿಸುತ್ತದೆ.

b) ಎಸ್‌ಬಿಐ ಕಾರ್ಪೋರೇಟ್ ಕಾರ್ಡ್ ಕಾರ್ಡ್‌ಧಾರಕರಿಗೆ ರಿವಾಲ್ವಿಂಗ್ ಕ್ರೆಡಿಟ್ ಸೌಲಭ್ಯವನ್ನು ನೀಡುವುದಿಲ್ಲ. ಯಾವುದೇ ದಂಡದ ಶುಲ್ಕವನ್ನು ತಪ್ಪಿಸಲು ಯಾವುದೇ ನಿರ್ದಿಷ್ಟ ಹೇಳಿಕೆಯಲ್ಲಿನ ಒಟ್ಟು ಬಾಕಿ ಮೊತ್ತವನ್ನು ಪೂರ್ಣವಾಗಿ ಪಾವತಿಸಬೇಕಾಗುತ್ತದೆ.

c) ಕಾರ್ಡ್ ಬಾಕಿ ಉಳಿದಿರುವ ಮೊತ್ತದ ಪಾವತಿಗಳನ್ನು ನಂತರದ ಹೇಳಿಕೆಗಳಲ್ಲಿ ಅಂಗೀಕರಿಸಲಾಗುತ್ತದೆ. ಇನ್ಪುಟ್ ಟ್ಯಾಕ್ಸ್ ಕ್ರೆಡಿಟ್ ಅಥವಾ ತೆರಿಗೆಗೆ ಸಂಬಂಧಿಸಿದ ಯಾವುದೇ ವಿಷಯವನ್ನು ಕುರಿತಂತೆ ಯಾವುದೇ ವಿವಾದವನ್ನು ಹೇಳಿಕೆ ನೀಡಿದ ದಿನಾಂಕದಿಂದ 30 ದಿನಗಳಲ್ಲಿ ಕಾರ್ಪೋರೇಟ್ ಕಾರ್ಡ್ ನೀಡುಗರಿಗೆ ತಿಳಿಸಬೇಕಾಗುತ್ತದೆ.

d) ಕಾರ್ಡ್‌ಧಾರಕರ ಕಾರ್ಡ್‌ನ ಬಾಕಿ ಉಳಿದಿರುವ ಮೊತ್ತಕ್ಕಾಗಿ ಪಡೆದ ಪಾವತಿಗಳನ್ನು ತೆರಿಗೆಗಳು, ಫೀಸುಗಳು ಮತ್ತು ಇತರ ಶುಲ್ಕಗಳು, ಬಡ್ಡಿ ಶುಲ್ಕಗಳು, ಖರೀದಿಗಳು ಮತ್ತು ನಗದು ಮುಂಗಡಗಳ ವಿರುದ್ಧ, ಆ ಕ್ರಮದಲ್ಲಿ ಹೊಂದಿಸಲಾಗುತ್ತದೆ. ಕಾರ್ಪೋರೇಟ್ ಕಾರ್ಡ್ ನೀಡುಗರಿಗೆ ಸೂಕ್ತವಾದ ಜಿಎಸ್‌ಟಿ ಅನುಸರಣೆಗಳನ್ನು ಕೈಗೊಳ್ಳಲು ಸಾಧ್ಯವಾಗುವಂತೆ ಸರಿಯಾದ ಮತ್ತು ಸಮಯೋಚಿತ ಮಾಹಿತಿಯನ್ನು ಒದಗಿಸುವ ಜವಾಬ್ದಾರಿಯನ್ನು ಕಾರ್ಡ್‌ಧಾರಕರು ಹೊಂದಿರುತ್ತಾರೆ

ಮತ್ತು ಇದು ಕಾರ್ಪೊರೇಟ್ ಕಾರ್ಡ್ ನೀಡುಗರು ತಯಾರಿಸಿದ ಸರಬರಾಜುಗಳ ಇನ್ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ತೆಗೆದುಕೊಳ್ಳಲು ಕಾರ್ಡ್‌ಧಾರಕರಿಗೆ ಅನುವು ಮಾಡಿಕೊಡುತ್ತದೆ. ಕಾರ್ಡ್‌ಧಾರಕರು ಒದಗಿಸಿದ ತಪ್ಪಾದ ಮಾಹಿತಿಯ ಕಾರಣದಿಂದಾಗಿ ಅಥವಾ ಕಾರ್ಡ್‌ಧಾರಕರ ಯಾವುದೇ ಕೃತ್ಯ ಅಥವಾ ಲೋಪದಿಂದಾಗಿ ಕಾರ್ಡ್‌ಧಾರಕರಿಗೆ ಯಾವುದೇ ಇನ್ಪುಟ್ ಟ್ಯಾಕ್ಸ್ ಕ್ರೆಡಿಟ್ ನಷ್ಟ ಅಥವಾ ಇನ್ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆಯುವಲ್ಲಿನ ವಿಳಂಬಕ್ಕೆ ಕಾರ್ಡ್ ನೀಡುಗರು ಜವಾಬ್ದಾರರಾಗಿರುವುದಿಲ್ಲ.

e) ಕಾರ್ಡ್ ಖಾತೆಗೆ ಪಾವತಿಗಳನ್ನು ಈ ಕೆಳಗಿನ ಯಾವುದೇ ವಿಧಾನಗಳಲ್ಲಿ ಮಾಡಬಹುದು:

- www.sbicard.com ಗೆ ಲಾಗ್ ಇನ್ ಮಾಡುವ ಮೂಲಕ ಮತ್ತು ನೆಟ್‌ಬ್ಯಾಂಕಿಂಗ್ ಅಥವಾ ನಿಮ್ಮ ಎಸ್‌ಬಿಐ ಎಟಿಎಂ ಕಮ್ ಡೆಬಿಟ್ ಕಾರ್ಡ್ ಮೂಲಕ ಪಾವತಿ ಮಾಡಲು ಪೇನೆಟ್ ಆಯ್ಕೆಯನ್ನು ಬಳಸಿ.
- ಹೇಳಿಕೆಯ ಹಿಮ್ಮುಖದಲ್ಲಿ ಒದಗಿಸಲಾದ ಮೇಲಿಂಗ್ ವಿಳಾಸಕ್ಕೆ ಚೆಕ್ ಅಥವಾ ಡ್ರಾಫ್ಟ್ ಅನ್ನು ಮೇಲ್ ಮಾಡುವ ಮೂಲಕ.
- ನಿಮ್ಮ ನಗರದಲ್ಲಿ ಅಥವಾ ಗೊತ್ತುಪಡಿಸಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗಳಲ್ಲಿ ಇರಿಸಲಾಗಿರುವ ಯಾವುದೇ ಎಸ್‌ಬಿಐ ಕಾರ್ಡ್ ಡ್ರಾಪ್ ಬಾಕ್ಸ್‌ಗಳಿಗೆ ಚೆಕ್ ಅಥವಾ ಡ್ರಾಫ್ಟ್ ಅನ್ನು ಹಾಕುವ ಮೂಲಕ. ಚೆಕ್/ಡ್ರಾಫ್ಟ್ ಅನ್ನು "ಎಸ್‌ಬಿಐ ಕಾರ್ಡ್ ಸಂಖ್ಯೆ xxxxxxxxxxxxxx" ಗೆ ಪಾವತಿಸಬೇಕು.
- ಎನ್‌ಎಸಿಹೆಚ್: ಆಯ್ದ ನಗರಗಳಲ್ಲಿ ನ್ಯಾಷನಲ್ ಆಟೋಮೇಟೆಡ್ ಕ್ಲಿಯರಿಂಗ್ (ಎನ್‌ಎಸಿಹೆಚ್) ಮೂಲಕ ಪಾವತಿಗಳನ್ನು ಮಾಡಬಹುದು.
- ಎನ್‌ಇಎಫ್‌ಟಿ (ನೆಫ್ಟ್):

ಫಲಾನುಭವಿಯ ಹೆಸರು: ಎಸ್‌ಬಿಐ ಕಾರ್ಡ್ಸ್ ಮತ್ತು ಪೇಮೆಂಟ್ ಸರ್ವೀಸಸ್ ಲಿಮಿಟೆಡ್.

ಬ್ಯಾಂಕ್ ವಿಳಾಸ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಾಣಿಜ್ಯ ಶಾಖೆ (04079), 6ನೇ ಮಹಡಿ, ಪಾಮ್ ಕೋರ್ಟ್, ಮಹಾರಾಣಾ ಪ್ರತಾಪ್ ಚೌಕ, ಎಂ.ಡಿ.ಐ ಹತ್ತಿರ, ಗುರುಗ್ರಾಮ-122001

ಬ್ಯಾಂಕ್ ಖಾತೆ ಸಂಖ್ಯೆ - 39735563903

ಐಎಫ್‌ಎಸ್‌ಸಿ ಕೋಡ್ - 'SBIN0004079'

f) ಎಸ್‌ಬಿಐ ಕಾರ್ಡ್ ಬಿಲ್ ಬಾಕಿ ಪಾವತಿಸುವ ವಿವಿಧ ವಿಧಾನಗಳನ್ನು ನೀಡುತ್ತದೆ, ಇದನ್ನೇ ಎಸ್‌ಬಿಐ ಕಾರ್ಡ್ ವೆಬ್‌ಸೈಟ್‌ನಲ್ಲಿ ಮತ್ತು ಮಾಸಿಕ ಹೇಳಿಕೆಯ ಹಿಂಭಾಗದಲ್ಲಿ ವಿವರಿಸಲಾಗಿದೆ. ಕಾರ್ಡ್‌ಧಾರಕರಿಂದ ಪಡೆದ ಯಾವುದೇ ಮುಂಗಡವನ್ನು ಭವಿಷ್ಯದ ಖರ್ಚಿನ ಮುಂಗಡ ಎಂದು ಪರಿಗಣಿಸಲಾಗುತ್ತದೆ ಮತ್ತು ಯಾವುದೇ ಶುಲ್ಕಗಳು/ಫೀಸುಗಳಿಗೆ ವಿರುದ್ಧವಾಗಿ ಅಲ್ಲ.

g) ಬಿಲ್ಲಿಂಗ್ ವಿವಾದಗಳು: ಹೇಳಿಕೆಯ ದಿನಾಂಕದ 30 ದಿನಗಳಲ್ಲಿ ಯಾವುದೇ ವ್ಯತ್ಯಾಸಗಳ ಬಗ್ಗೆ ಕಾರ್ಡ್‌ಧಾರಕರು ಎಸ್‌ಬಿಐಸಿಪಿಎಸ್‌ಎಲ್‌ಗೆ ತಿಳಿಸದ, ಮತ್ತು ಈ ವ್ಯತ್ಯಾಸಗಳು ಎಸ್‌ಬಿಐಸಿಪಿಎಸ್‌ಎಲ್‌ನಿಂದ ನಿಜವೆಂದು ಕಂಡುಬರದ ಹೊರತು, ಹೇಳಿಕೆಗಳ ಎಲ್ಲಾ ವಿಷಯಗಳು ಕಾರ್ಡ್‌ಧಾರಕರಿಗೆ ಸರಿಯಾಗಿದೆ ಮತ್ತು ಅವುಗಳನ್ನು ಅವರು ಸ್ವೀಕರಿಸುತ್ತಾರೆ ಎಂದು ಪರಿಗಣಿಸಲಾಗುತ್ತದೆ. ಅಂತಹ ಮಾಹಿತಿಯನ್ನು ಪಡೆದ ನಂತರ, ಎಸ್‌ಬಿಐಸಿಪಿಎಸ್‌ಎಲ್ ತಾತ್ಕಾಲಿಕ ಆಧಾರದ ಮೇಲೆ ಶುಲ್ಕವನ್ನು ಹಿಂತಿರುಗಿಸಬಹುದು. ಒಂದು ವೇಳೆ ನಂತರದ ತನಿಖೆಗಳು ಪೂರ್ಣಗೊಂಡರೆ, ಅಂತಹ ಶುಲ್ಕಗಳ ಹೊಣೆಗಾರಿಕೆಯು ಕಾರ್ಡ್‌ಧಾರಕರ ಖಾತೆಗೆ ಇದ್ದರೆ, ನಂತರದ ಹೇಳಿಕೆಯಲ್ಲಿ ಶುಲ್ಕವನ್ನು ಮರುಪಡೆಯಲಾಗುತ್ತದೆ.

h) ಗ್ರಾಹಕರ ಕುಂದುಕೊರತೆ ಪರಿಹಾರ: ಎಲ್ಲಾ ಕುಂದುಕೊರತೆ ಹೆಚ್ಚಿಕೆಗಳನ್ನು ಹೆಡ್-ಕಾರ್ಪೊರೇಟ್ ಕಸ್ಟಮರ್ ಮ್ಯಾನೇಜ್ಮೆಂಟ್, ಡಿಎಲ್‌ಎಫ್ ಇನ್ಫಿನಿಟಿ ಟವರ್ಸ್, ಟವರ್ ಸಿ, 12ನೇ ಮಹಡಿ, ಬ್ಲಾಕ್ 2, ಬಿಲ್ಡಿಂಗ್ 3, ಡಿಎಲ್‌ಎಫ್ ಸೈಬರ್ ಸಿಟಿ ಗುರುಗ್ರಾಮ-122002 (ಹರಿಯಾಣ)

ಭಾರತ - ಇಲ್ಲಿಗೆ ಗುರುತಿಸಬೇಕು.ಕಾರ್ಪೋರೇಟ್ ಕಾರ್ಡ್ ಪ್ರೋಗ್ರಾಂ ಮ್ಯಾನೇಜರ್ ಅಥವಾ ಕಾರ್ಡ್‌ಧಾರಕರು ಯಾವುದೇ ವಿಚಾರಣೆಗಳನ್ನು ಮಾಡಲು ಅಥವಾ ಯಾವುದೇ ಕುಂದುಕೊರತೆ ಪರಿಹಾರಕ್ಕಾಗಿ ಇ-ಮೇಲ್ ಮೂಲಕ sbicorporate.services@sbicard.com ಗೆ ಅಥವಾ - ಕಾರ್ಡ್ ಖಾತೆಯಲ್ಲಿ ಬಾಕಿ ಉಳಿದಿರುವ ಯಾವುದೇ ಹಣವನ್ನು ಇತ್ಯರ್ಥಗೊಳಿಸಲು ಕಾಲಕಾಲಕ್ಕೆ, ಪೋಸ್ಟ್, ಫ್ಯಾಕ್ಸ್, ದೂರವಾಣಿ, ಇ-ಮೇಲ್, ಎಸ್‌ಎಂಎಸ್ ಸಂದೇಶ ಮತ್ತು/ಅಥವಾ ಜ್ಞಾಪಿಸಲು, ಅನುಸರಿಸಲು ಮತ್ತು ಬಾಕಿಗಳನ್ನು ಸಂಗ್ರಹಿಸಲು ಮೂರನೇ ವ್ಯಕ್ತಿಗಳನ್ನು ತೊಡಗಿಸುವುದಕ್ಕಾಗಿ ಇರುವ 24-ಗಂಟೆಗಳ ಎಸ್‌ಬಿಐ ಕಾರ್ಡ್ ಸಹಾಯವಾಣಿ: 1860 180 1290, 39 02 02 02 (ಸ್ಥಳೀಯ ಎಸ್‌ಟಿಡಿ ಕೋಡ್ ಪೂರ್ವಪ್ರತ್ಯಯ) ಮೂಲಕ ಎಸ್‌ಬಿಐಸಿಪಿಎಸ್‌ಎಲ್ ಅನ್ನು ಸಂಪರ್ಕಿಸಬಹುದು. ಹೀಗೆ ನೇಮಕಗೊಂಡ ಯಾವುದೇ ಮೂರನೇ ವ್ಯಕ್ತಿಯು ಸಾಲ ವಸೂಲಾತಿಯ ನೀತಿ ಸಂಹಿತೆಯನ್ನು ಸಂಪೂರ್ಣವಾಗಿ ಪಾಲಿಸಬೇಕು. ಕಾರ್ಡ್‌ಧಾರಕರ ದಿವಾಳಿತನ ಅಥವಾ ಸಾವು ಉಂಟಾದ ಸಂದರ್ಭದಲ್ಲಿ, ಕಾರ್ಡ್ ಖಾತೆಯ ಮೇಲಿನ ಒಟ್ಟು ಬಾಕಿ ಮೊತ್ತದ ಜೊತೆಗೆ, ಕಾರ್ಡ್ ಖಾತೆಗೆ ವಿಧಿಸಲಾದ, ಆದರೆ ಇನ್ನೂ ಜಾರಿಯಾಗದ ಯಾವುದೇ ಶುಲ್ಕಗಳ ಮೊತ್ತವು, ತಕ್ಷಣವೇ ಬಾಕಿಯಾಗುತ್ತದೆ ಮತ್ತು ಎಸ್‌ಬಿಐಸಿಪಿಎಸ್‌ಎಲ್‌ಗೆ ಪೂರ್ಣವಾಗಿ ಪಾವತಿಸಬೇಕಾಗುತ್ತದೆ ಮತ್ತು ಕಾರ್ಡ್ ಖಾತೆಯು ತಕ್ಷಣವೇ ರದ್ದುಗೊಳ್ಳುತ್ತದೆ. ಕಾರ್ಡ್ ಖಾತೆಯ ಮೇಲಿನ ಯಾವುದೇ ಬಾಕಿ ಉಳಿದಿರುವ ಮೊತ್ತವನ್ನು ಇತ್ಯರ್ಥಪಡಿಸುವ ಜವಾಬ್ದಾರಿಯು ಕಾರ್ಡ್‌ಧಾರಕರ ಎಸ್ಟೇಟ್‌ನದ್ದಾಗಿರುತ್ತದೆ ಮತ್ತು ಕಾನೂನು ಶುಲ್ಕಗಳು ಮತ್ತು ಅಂತಹ ಬಾಕಿ ಉಳಿದಿರುವ ಮೊತ್ತವನ್ನು ಮರುಪಡೆಯಲು ಆಗುವ ವೆಚ್ಚಗಳು ಸೇರಿದಂತೆ, ಎಲ್ಲಾ ವೆಚ್ಚಗಳ ವಿರುದ್ಧ ಎಸ್‌ಬಿಐಸಿಪಿಎಸ್‌ಎಲ್‌ಗೆ ನಷ್ಟಭರ್ತಿ ಮಾಡಬೇಕಿರುತ್ತದೆ. ಅಂತಹ ಬಾಕಿ ಉಳಿದಿರುವ ಮರುಪಾವತಿಗಳಿಗೆ, ತನ್ನ ಚಾಲ್ತಿಯಲ್ಲಿರುವ ದರದಲ್ಲಿ ಹಣಕಾಸು ಶುಲ್ಕವನ್ನು ವಿಧಿಸುವುದನ್ನು ಮುಂದುವರಿಸಲು ಎಸ್‌ಬಿಐಸಿಪಿಎಸ್‌ಎಲ್ ಅರ್ಹವಾಗಿರುತ್ತದೆ.

4. ಡೀಫಾಲ್ಟ್

ಡೀಫಾಲ್ಟ್ ಸಂದರ್ಭದಲ್ಲಿ, ಕಾರ್ಡ್ ಖಾತೆಯ ಮೇಲಿನ ಯಾವುದೇ ಬಾಕಿ ಇರುವ ಹಣವನ್ನು ಇತ್ಯರ್ಥಗೊಳಿಸುವಂತೆ ಕಾರ್ಡ್‌ಧಾರಕರಿಗೆ ಕಾಲಕಾಲಕ್ಕೆ ಜ್ಞಾಪನೆಗಳನ್ನು, ಪೋಸ್ಟ್, ಫ್ಯಾಕ್ಸ್, ದೂರವಾಣಿ, ಇ-ಮೇಲ್, ಎಸ್‌ಎಂಎಸ್ ಸಂದೇಶಗಳ ಮೂಲಕ ಕಳುಹಿಸಲಾಗುತ್ತದೆ ಮತ್ತು/ ಅಥವಾ ಮೂರನೇ ವ್ಯಕ್ತಿಗಳನ್ನು ನೆನಪಿಸಲು, ಅನುಸರಿಸಲು ಮತ್ತು ಬಾಕಿ ಸಂಗ್ರಹಿಸಲು ತೊಡಗಿಸಲಾಗುತ್ತದೆ. ಹೀಗೆ ನೇಮಕಗೊಂಡ ಯಾವುದೇ ಮೂರನೇ ವ್ಯಕ್ತಿಯು ಸಾಲ ವಸೂಲಾತಿಯ ನೀತಿ ಸಂಹಿತೆಯನ್ನು ಸಂಪೂರ್ಣವಾಗಿ ಪಾಲಿಸಬೇಕು. ಕಾರ್ಡ್‌ಧಾರಕರ ದಿವಾಳಿತನ ಅಥವಾ ಸಾವು ಉಂಟಾದ ಸಂದರ್ಭದಲ್ಲಿ, ಕಾರ್ಡ್ ಖಾತೆಯ ಮೇಲಿನ ಒಟ್ಟು ಬಾಕಿ ಮೊತ್ತದ ಜೊತೆಗೆ, ಕಾರ್ಡ್ ಖಾತೆಗೆ ವಿಧಿಸಲಾದ, ಆದರೆ ಇನ್ನೂ ಜಾರಿಯಾಗದ ಯಾವುದೇ ಶುಲ್ಕಗಳ ಮೊತ್ತವು, ತಕ್ಷಣವೇ ಬಾಕಿಯಾಗುತ್ತದೆ ಮತ್ತು ಎಸ್‌ಬಿಐಸಿಪಿಎಸ್‌ಎಲ್‌ಗೆ ಪೂರ್ಣವಾಗಿ ಪಾವತಿಸಬೇಕಾಗುತ್ತದೆ ಮತ್ತು ಕಾರ್ಡ್ ಖಾತೆಯು ತಕ್ಷಣವೇ ರದ್ದುಗೊಳ್ಳುತ್ತದೆ. ಕಾರ್ಡ್ ಖಾತೆಯ ಮೇಲಿನ ಯಾವುದೇ ಬಾಕಿ ಉಳಿದಿರುವ ಮೊತ್ತವನ್ನು ಇತ್ಯರ್ಥಪಡಿಸುವ ಜವಾಬ್ದಾರಿಯು ಕಾರ್ಡ್‌ಧಾರಕರ ಎಸ್ಟೇಟ್‌ನದ್ದಾಗಿರುತ್ತದೆ ಮತ್ತು ಕಾನೂನು ಶುಲ್ಕಗಳು ಮತ್ತು ಅಂತಹ ಬಾಕಿ ಉಳಿದಿರುವ ಮೊತ್ತವನ್ನು ಮರುಪಡೆಯಲು ಆಗುವ ವೆಚ್ಚಗಳು ಸೇರಿದಂತೆ, ಎಲ್ಲಾ ವೆಚ್ಚಗಳ ವಿರುದ್ಧ ಎಸ್‌ಬಿಐಸಿಪಿಎಸ್‌ಎಲ್‌ಗೆ ನಷ್ಟಭರ್ತಿ ಮಾಡಬೇಕಿರುತ್ತದೆ.

ಆರ್‌ಬಿಐನಿಂದ ನೋಂದಣಿ ಪ್ರಮಾಣಪತ್ರವನ್ನು ಪಡೆದ ಮತ್ತು ಎಸ್‌ಬಿಐಸಿಪಿಎಸ್‌ಎಲ್ ಸದಸ್ಯರಾಗಿರುವ ಕ್ರೆಡಿಟ್ ಮಾಹಿತಿ ಕಂಪನಿಗೆ ಕಾರ್ಡ್‌ಧಾರಕರ ಡೀಫಾಲ್ಟ್ ಸ್ಥಿತಿಯನ್ನು ವರದಿ

ಮಾಡುವ ಮೊದಲು, ನಾವು ಕಾರ್ಡ್‌ಧಾರಕರಿಗೆ ಒಂದು ತಿಂಗಳ ಸೂಚನೆಯನ್ನು ನೀಡುತ್ತೇವೆ. ಒಂದು ವೇಳೆ ಕಾರ್ಡ್‌ಧಾರಕರು, ಡೀಫಾಲ್ಟರ್ ಎಂದು ವರದಿ ಮಾಡಿದ ನಂತರ, ಅವನ/ಅವಳ ಬಾಕಿಗಳನ್ನು ಪಾವತಿಸಿದರೆ, ಎಸ್‌ಬಿಐಸಿಪಿಎಸ್‌ಎಲ್ ಕ್ರೆಡಿಟ್ ಮಾಹಿತಿ ಕಂಪನಿಯಿಂದ ಡೀಫಾಲ್ಟರ್ ಸ್ಥಿತಿಯನ್ನು ಹಿಂತೆಗೆದುಕೊಳ್ಳುತ್ತದೆ ಎಂಬುದನ್ನು ಗಮನಿಸಬಹುದು. ಇಂತಹ ಬದಲಾವಣೆಗಳು ಕಾರ್ಡ್‌ಧಾರಕರ ಕ್ರೆಡಿಟ್ ವರದಿಯಲ್ಲಿ ಪ್ರತಿಫಲಿಸಲು 45-60 ದಿನಗಳನ್ನು ತೆಗೆದುಕೊಳ್ಳಬಹುದು. ಎಸ್‌ಬಿಐಸಿಪಿಎಸ್‌ಎಲ್ ಕಾರ್ಡ್‌ಧಾರಕರ ಡೇಟಾವನ್ನು ಕ್ರೆಡಿಟ್ ಮಾಹಿತಿ ಕಂಪನಿಗೆ ಪ್ರತಿ ತಿಂಗಳು ನಿಗದಿತ ಸ್ವರೂಪದಲ್ಲಿ ಸಲ್ಲಿಸುತ್ತದೆ. ಕ್ರೆಡಿಟ್ ಮಾಹಿತಿ ಕಂಪನಿಯು ಸಲ್ಲಿಸಿದ ಡೇಟಾವನ್ನು 30 ದಿನಗಳ ಅವಧಿಯಲ್ಲಿ ತಮ್ಮ ಸರ್ವರ್‌ಗೆ ಅಪ್‌ಲೋಡ್ ಮಾಡುತ್ತದೆ. ಎಸ್‌ಬಿಐಸಿಪಿಎಸ್‌ಎಲ್ ತನ್ನ ಸ್ವಂತ ವಿವೇಚನೆಯಿಂದ ಕಾರ್ಪೋರೇಟ್ ಕಾರ್ಡ್‌ನೊಂದಿಗೆ ಕೆಲವು ವಿಮಾ ರಕ್ಷಣೆಯನ್ನು ಒದಗಿಸಬಹುದು ಮತ್ತು ಕಾರ್ಪೋರೇಟ್/ಕಾರ್ಡ್‌ಧಾರಕರಿಗೆ ಯಾವುದೇ ಮುನ್ಸೂಚನೆಯಿಲ್ಲದೆ ಅದನ್ನು ಹಿಂಪಡೆಯಲು ಸಂಪೂರ್ಣ ಹಕ್ಕನ್ನು ಹೊಂದಿರುತ್ತದೆ. ಎಸ್‌ಬಿಐಸಿಪಿಎಸ್‌ಎಲ್ ವೆಬ್‌ಸೈಟ್‌ನಲ್ಲಿ ಅಂತಹ ಕೊಡುಗೆಗಳ ವಿವರಗಳನ್ನು ಎಲ್ಲಾ ಸಮಯದಲ್ಲೂ ನವೀಕರಿಸುತ್ತದೆ. ನವೀಕರಿಸಿದ ವಿವರಗಳಿಗಾಗಿ, ಕಾರ್ಪೋರೇಟ್/ಕಾರ್ಡ್‌ಧಾರಕರು www.sbicard.com ಅನ್ನು ಉಲ್ಲೇಖಿಸಬೇಕು. ಕಾರ್ಪೋರೇಟ್ ಕಾರ್ಡ್‌ಧಾರಕರಿಗೆ ಕಾರ್ಪೋರೇಟ್ ಕಾರ್ಡ್ ವಿತರಿಸಿದ ದಿನಾಂಕದಿಂದ ಆಯಾ ವಿಮಾ ರಕ್ಷಣೆಯು ಅನ್ವಯವಾಗುತ್ತದೆ ಮತ್ತು/ಅಥವಾ ಸಕ್ರಿಯಗೊಳ್ಳುತ್ತದೆ.

5. ಕಾರ್ಡ್‌ಧಾರಕತ್ವವನ್ನು ಕೊನೆಗೊಳಿಸುವಿಕೆ/ಹಿಂತೆಗೆದುಕೊಳ್ಳುವಿಕೆ

a) ಕಾರ್ಪೋರೇಟ್ ಕಾರ್ಡ್ ಪ್ರೋಗ್ರಾಂ ಮ್ಯಾನೇಜರ್ ಅಥವಾ ಕಾರ್ಪೋರೇಟ್ ಕಾರ್ಡ್ ಪ್ರೋಗ್ರಾಂ ಮ್ಯಾನೇಜರ್‌ನ ಅನುಮೋದನೆಯೊಂದಿಗೆ ಕಾರ್ಡ್‌ಧಾರಕರು ಯಾವುದೇ ಸಮಯದಲ್ಲಿ ಎಸ್‌ಬಿಐಸಿಪಿಎಸ್‌ಎಲ್‌ಗೆ ಬರೆಯುವ ಮೂಲಕ ಅಥವಾ ಎಸ್‌ಬಿಐಕಾರ್ಡ್ ಸಹಾಯವಾಣಿಗೆ ಕರೆ ಮಾಡುವ ಮೂಲಕ ಮತ್ತು ಕಾರ್ಡ್ (ಗಳನ್ನು) ಕಣ್ಣೀಯವಾಗಿ ಕತ್ತರಿಸುವ ಮೂಲಕ ಒಪ್ಪಂದವನ್ನು ಕೊನೆಗೊಳಿಸಬಹುದು. ಕಾರ್ಡ್‌ಧಾರಕರು ಕಾರ್ಡ್ ಖಾತೆಯಲ್ಲಿ ಬಾಕಿ ಇರುವ ಎಲ್ಲಾ ಮೊತ್ತವನ್ನು ಪಾವತಿಸಿದ ನಂತರ ಕೊನೆಗೊಳಿಸುವಿಕೆಯು ಪರಿಣಾಮಕಾರಿಯಾಗಿರುತ್ತದೆ. ಪ್ರೊ-ರಾಟಾ ಆಧಾರದ ಮೇಲೆ ಯಾವುದೇ ಸೇರ್ಪಡೆ ಅಥವಾ ನವೀಕರಣ/ವಾರ್ಷಿಕ ಶುಲ್ಕವನ್ನು ಮರುಪಾವತಿಸಲಾಗುವುದಿಲ್ಲ.

b) ಒಂದು ವೇಳೆ ವ್ಯವಹಾರ ಅಥವಾ ಭದ್ರತಾ ಕಾರಣಗಳಿಗಾಗಿ ಅದು ಅಗತ್ಯವೆಂದು ಎಸ್‌ಬಿಐಸಿಪಿಎಸ್‌ಎಲ್ ನಂಬಿದಲ್ಲಿ ಮತ್ತು/ಅಥವಾ ಯಾವುದೇ ಕಾನೂನು ಜಾರಿ ಸಂಸ್ಥೆ ಮತ್ತು/ಅಥವಾ ಯಾವುದೇ ಸರ್ಕಾರೀ ಪ್ರಾಧಿಕಾರದ ಕೋರಿಕೆಯ ಮೇರೆಗೆ ಮತ್ತು/ಅಥವಾ ಎಸ್‌ಬಿಐಸಿಪಿಎಸ್‌ಎಲ್ ಮತ್ತು ಅದರ ಗ್ರಾಹಕರಿಗೆ ಅನ್ವಯವಾಗುವ ಕಾನೂನುಗಳು ಮತ್ತು ನಿಬಂಧನೆಗಳ ಅಡಿಯಲ್ಲಿ, ಕಾರ್ಡ್‌ಧಾರಕರ ಖಾತೆಯ ಬಳಕೆಯನ್ನು ಎಸ್‌ಬಿಐಸಿಪಿಎಸ್‌ಎಲ್ ಯಾವುದೇ ಸಮಯದಲ್ಲಿ ಪೂರ್ವ ಸೂಚನೆ ಇಲ್ಲದೆ ನಿರ್ಬಂಧಿಸಬಹುದು, ಕೊನೆಗೊಳಿಸಬಹುದು ಅಥವಾ ಅಮಾನತುಗೊಳಿಸಬಹುದು.

c) ಕಾರ್ಡ್‌ಧಾರಕರು ಪಾವತಿಸಬೇಕಾದ ಹಣವನ್ನು ಡೀಫಾಲ್ಟ್ ಮಾಡಿದರೆ ಅಥವಾ ವಿಸ್ತರಿಸಿದ ಕ್ರೆಡಿಟ್ ಮಿತಿಯನ್ನು ಮೀರಿದರೆ ಕಾರ್ಪೋರೇಟ್ ಕಾರ್ಡ್‌ನಲ್ಲಿರುವ ಸೌಲಭ್ಯವನ್ನು ಎಸ್‌ಬಿಐಸಿಪಿಎಸ್‌ಎಲ್ ಅಮಾನತುಗೊಳಿಸಬಹುದು. ಒಪ್ಪಂದ ಮುಗಿದ ನಂತರ ಅಥವಾ ಕಾರ್ಡ್ ಖಾತೆಯ ಬಳಕೆಯನ್ನು ಸ್ಥಗಿತಗೊಳಿಸಿದಾಗ ಕಾರ್ಡ್ ಅನ್ನು ಬಳಸಬಾರದು. ಅಂತಹ ಪರಿಸ್ಥಿತಿಯಲ್ಲಿ, ಕಾರ್ಡ್‌ಧಾರಕರು (ಯಾವುದೇ ಡೀಫಾಲ್ಟ್ ಅಥವಾ ಕಾನೂನಿನ ಅಗತ್ಯವಿರುವ ಇತರ ಸೂಚನೆಗೆ ಒಳಪಟ್ಟಿರುತ್ತದೆ) ತಕ್ಷಣವೇ ಎಸ್‌ಬಿಐಸಿಪಿಎಸ್‌ಎಲ್‌ಗೆ ಖಾತೆಯ ಮೇಲಿನ ಬಾಕಿ ಮೊತ್ತವನ್ನು

ಪಾವತಿಸಬೇಕು. ಇದರಲ್ಲಿ ಎಲ್ಲಾ ವಹಿವಾಟುಗಳು ಮತ್ತು ಖಾತೆಗೆ ಇನ್ನೂ ವಿಧಿಸಲಾಗದ ಇತರ ಮೊತ್ತಗಳು ಸೇರಿದಂತೆ, ಒಪ್ಪಂದದ ಅಡಿಯಲ್ಲಿ ಎಸ್‌ಬಿಐಸಿಪಿಎಸ್‌ಎಲ್‌ಗೆ ಬಾಕಿ ಇರುವ ಎಲ್ಲಾ ಮೊತ್ತಗಳು ಸೇರಿರುತ್ತವೆ. ಕಾರ್ಡ್‌ಧಾರಕರು ಅಂತಹ ಎಲ್ಲಾ ಬಾಕಿ ಮೊತ್ತವನ್ನು ಪಾವತಿಸುವವರೆಗೆ ಕಾರ್ಡ್ ಹೋಲ್ಡರ್ ಖಾತೆಯನ್ನು ಮುಚ್ಚಲಾಗಿದೆ ಎಂದು ಪರಿಗಣಿಸಲಾಗುವುದಿಲ್ಲ.

6. ಕಾರ್ಡ್‌ನ ನಷ್ಟ/ಕಳ್ಳತನ/ದುರುಪಯೋಗ

a) ಒಂದು ವೇಳೆ ಕಾರ್ಪೋರೇಟ್ ಕಾರ್ಡ್ ಅನ್ನು ತಪ್ಪಾಗಿ ಎಲ್ಲಿಯೋ ಇರಿಸಿದ್ದರೆ, ಕಳೆದುಹೋದರೆ, ಕದ್ದಿದ್ದರೆ, ವಿರೂಪಗೊಂಡಿದ್ದರೆ, ನಿರ್ಧಾರಿತ ಗಡುವಿನೊಳಗೆ ಸ್ವೀಕರಿಸದಿದ್ದರೆ ಅಥವಾ ಕಾರ್ಡ್‌ಧಾರಕರ ಅನುಮತಿಯಿಲ್ಲದೆ ಕಾರ್ಪೋರೇಟ್ ಕಾರ್ಡ್ ಅನ್ನು ಬಳಸಲಾಗುತ್ತಿದೆ ಎಂದು ಅವನು/ಅವಳು ಭಾವಿಸಿದಲ್ಲಿ, ಸಾಧ್ಯವಾದಷ್ಟು ಬೇಗ ಕಾರ್ಡ್‌ಧಾರಕರು ಎಸ್‌ಬಿಐ ಕಾರ್ಡ್ ಸಹಾಯವಾಣಿಯ ಮೂಲಕ ಎಸ್‌ಬಿಐಸಿಪಿಎಸ್‌ಎಲ್ ಅನ್ನು ಸಂಪರ್ಕಿಸಬೇಕು. ಒಂದು ಕಾರ್ಡ್ ಕಳೆದುಹೋಗಿದೆ ಎಂದು ವರದಿ ಮಾಡಿದ ನಂತರ, ಅದನ್ನು ಯಾವುದೇ ಸಂದರ್ಭದಲ್ಲಿ ಕಾರ್ಡ್‌ಧಾರಕರು ಕಂಡುಕೊಂಡರೆ ಅದನ್ನು ಬಳಸಬಾರದು ಮತ್ತು ಕಾರ್ಡ್‌ಧಾರಕರು ಕಾರ್ಡ್ ಅನ್ನು ಕಣ್ಣೀಯವಾಗಿ ಅರ್ಧದಷ್ಟು ಕತ್ತರಿಸಬೇಕು.

· ಕಾರ್ಡ್‌ಧಾರಕರು ಕಾರ್ಡ್ ಅನ್ನು ಐವಿಆರ್ ಅಥವಾ ನಮ್ಮ ವೆಬ್‌ಸೈಟ್ www.sbicard.com ಅಥವಾ PULL SMS ಮೂಲಕ ಕೂಡಲೇ ನಿರ್ಬಂಧಿಸಬಹುದು

· ನಿಮ್ಮ ಕಳೆದುಹೋದ/ಕದ್ದ ಕಾರ್ಡ್ ಅನ್ನು PULL SMS ಮೂಲಕ ನಿರ್ಬಂಧಿಸಲು, ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯಿಂದ BLOCK XXXX ಅನ್ನು 5676791 ಗೆ ಎಸ್‌ಎಂಎಸ್ ಮಾಡಿ. (XXXX = ನಿಮ್ಮ ಕಾರ್ಡ್ ಸಂಖ್ಯೆಯ ಕೊನೆಯ 4 ಅಂಕೆಗಳು). ಒಂದು ವೇಳೆ ನಿಮ್ಮ ವಿನಂತಿಸಿದ ನಂತರ 5 ನಿಮಿಷಗಳಲ್ಲಿ ನೀವು ದೃಢೀಕರಣ ಎಸ್‌ಎಂಎಸ್ ಅನ್ನು ಸ್ವೀಕರಿಸದಿದ್ದರೆ, ದಯವಿಟ್ಟು ಕಾರ್ಡ್ ಅನ್ನು ನಿರ್ಬಂಧಿಸಲಾಗಿದೆ ಎಂದು ಪರಿಗಣಿಸಬೇಡಿ. ನಿಮ್ಮ ಕಾರ್ಡ್ ಅನ್ನು ತಕ್ಷಣವೇ ನಿರ್ಬಂಧಿಸಲು ಮತ್ತು ಯಾವುದೇ ದುರುಪಯೋಗವನ್ನು ತಪ್ಪಿಸಲು ದಯವಿಟ್ಟು ಸಹಾಯ ವಾಣಿಗೆ ಕರೆ ಮಾಡಿ.

b) ಯಾವುದೇ ಅನಧಿಕೃತ ವಹಿವಾಟುಗಳನ್ನು ವರದಿ ಮಾಡಲು ಮತ್ತು/ಅಥವಾ ಕಾರ್ಡ್‌ನ ನಷ್ಟ ಅಥವಾ ಕಳ್ಳತನವನ್ನು ವರದಿ ಮಾಡಲು ಕಾರ್ಡ್‌ಧಾರಕರು ಯಾವುದೇ ಬಹು ಚಾನೆಲ್‌ಗಳ ಮೂಲಕ ಎಸ್‌ಬಿಐಸಿಪಿಎಸ್‌ಎಲ್‌ಗೆ ತಿಳಿಸಬೇಕು. ಯಾವುದೇ ಅನಧಿಕೃತ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ವಹಿವಾಟುಗಳಿಗೆ "ಗ್ರಾಹಕ ಸಂರಕ್ಷಣೆ - ಅನಧಿಕೃತ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ವಹಿವಾಟಿನಲ್ಲಿ ಗ್ರಾಹಕರ ಹೊಣೆಗಾರಿಕೆಯನ್ನು ಸೀಮಿತಗೊಳಿಸುವುದು" ಎಂಬಲ್ಲಿನ ನಿಯಮಗಳು ಮತ್ತು ನಿರ್ದೇಶನಗಳಿಗೆ ಅನುಗುಣವಾಗಿ ಮಾತ್ರ ಎಸ್‌ಬಿಐಸಿಪಿಎಸ್‌ಎಲ್ ಜವಾಬ್ದಾರವಾಗಿರುತ್ತದೆ.

ಎಸ್‌ಬಿಐಸಿಪಿಎಸ್‌ಎಲ್‌ಗೆ ಕಾರ್ಡ್‌ನ ನಷ್ಟವನ್ನು ವರದಿ ಮಾಡುವ ಸಮಯಕ್ಕೆ ಮುಂಚೆತವಾಗಿ ಕಾರ್ಡ್ ಖಾತೆಯಲ್ಲಿ ಯಾವುದೇ ವಹಿವಾಟುಗಳಿಗೆ ಎಸ್‌ಬಿಐಸಿಪಿಎಸ್‌ಎಲ್ ಜವಾಬ್ದಾರನಾಗಿರುವುದಿಲ್ಲ ಅಥವಾ ಹೊಣೆಯನ್ನು ಹೊರುವುದಿಲ್ಲ ಮತ್ತು ಎಸ್‌ಬಿಐಸಿಪಿಎಸ್‌ಎಲ್‌ನ ನ್ಯೂನತೆಯಿಂದಾಗಿ ಗ್ರಾಹಕರಿಗೆ ನಷ್ಟವಾಗದ ಹೊರತು ಕಾರ್ಡ್‌ಹೋಲ್ಡರ್ ಇದಕ್ಕೆ ಸಂಪೂರ್ಣ ಹೊಣೆಗಾರನಾಗಿರುತ್ತಾನೆ. ಎಸ್‌ಬಿಐಸಿಪಿಎಸ್‌ಎಲ್ (ವೆಬ್‌ಸೈಟ್, ಫೋನ್ ಬ್ಯಾಂಕಿಂಗ್, ಎಸ್‌ಎಂಎಸ್, ಇಮೇಲ್, ಐವಿಆರ್ ಅಥವಾ ಮೀಸಲಾದ ಸಹಾಯವಾಣಿ ಮೂಲಕ) ನಷ್ಟದ ಸರಿಯಾದ ಅಧಿಸೂಚನೆಯನ್ನು ಸ್ವೀಕರಿಸಿದ ನಂತರ, ಕಾರ್ಡ್‌ಧಾರಕರ ನಂತರದ ಹೊಣೆಗಾರಿಕೆಯನ್ನು ಗರಿಷ್ಠ ರೂ.1000 ವರೆಗೆ ನಿರ್ಬಂಧಿಸಲಾಗಿದೆ. ಕಾರ್ಡ್‌ನ ನಷ್ಟ ಅಥವಾ ಕಳ್ಳತನದ ಬಗ್ಗೆ ಎಸ್‌ಬಿಐಸಿಪಿಎಸ್‌ಎಲ್‌ಗೆ

ತಿಳಿಸುವುದರ ಜೊತೆಗೆ, ಕಾರ್ಡ್‌ಧಾರಕರು ಕಾರ್ಪೋರೇಟ್ ಕಾರ್ಡ್‌ನ (ಗಳ) ಯಾವುದೇ ಕಳ್ಳತನವನ್ನು ಪೊಲೀಸರಿಗೆ ವರದಿ ಮಾಡಬೇಕು ಮತ್ತು ಎಫ್‌ಐಆರ್ ಅನ್ನು ದಾಖಲಿಸಬೇಕು. ಆದಾಗ್ಯೂ, ಯಾರಾದರೂ ಕಾರ್ಡ್ ಅಥವಾ ಪಿನ್ ಅನ್ನು ಕಾರ್ಡ್‌ಧಾರಕರ ಒಪ್ಪಿಗೆಯೊಂದಿಗೆ ಪಡೆದುಕೊಂಡು ದುರುಪಯೋಗಪಡಿಸಿಕೊಂಡಾಗ ಎಲ್ಲಾ ನಷ್ಟಗಳಿಗೆ ಕಾರ್ಡ್‌ಧಾರಕರೇ ಹೊಣೆಗಾರನಾಗಿರುತ್ತಾರೆ,

c) ಕಾರ್ಡ್‌ಧಾರಕರು ಮೋಸದಿಂದ ವರ್ತಿಸಿದರೆ ಉಂಟಾಗುವ ಎಲ್ಲಾ ನಷ್ಟಗಳಿಗೆ ಕಾರ್ಡ್‌ಧಾರಕರೇ ಹೊಣೆಗಾರನಾಗಿರುತ್ತಾರೆ. ಒಂದು ವೇಳೆ ಕಾರ್ಡ್‌ಧಾರಕರು ಸಮಂಜಸವಾದ ಕಾಳಜಿಯಿಲ್ಲದೆ ವರ್ತಿಸಿದರೆ, ಆಗುವ ಎಲ್ಲಾ ನಷ್ಟಗಳಿಗೆ ಕಾರ್ಡ್‌ಧಾರಕರೇ ಹೊಣೆಗಾರರಾಗಿರಬಹುದು. ಎಸ್‌ಬಿಐಸಿಪಿಎಸ್‌ಎಲ್ ನಿರ್ದಿಷ್ಟಪಡಿಸಿದಂತೆ ಸುರಕ್ಷತೆಗಳನ್ನು ಅನುಸರಿಸಲು ಕಾರ್ಡ್‌ಧಾರಕರು ವಿಫಲವಾದರೆ ಇದು ಅನ್ವಯಿಸಬಹುದು.

d) 06 ಜುಲೈ 17 ರ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಆದೇಶದಂತೆ, ಗ್ರಾಹಕ ಸಂರಕ್ಷಣೆ - ಅನಧಿಕೃತ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ವಹಿವಾಟಿನಲ್ಲಿ ಗ್ರಾಹಕರ ಹೊಣೆಗಾರಿಕೆಯನ್ನು ಸೀಮಿತಗೊಳಿಸುವಿಕೆ, ಅನಧಿಕೃತ ಕ್ರೆಡಿಟ್ ಕಾರ್ಡ್ ವಹಿವಾಟುಗಳಿಗೆ ಸಂಬಂಧಿಸಿದಂತೆ ಗ್ರಾಹಕರ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ವಿನ್ಯಾಸಗೊಳಿಸಲಾದ ಒಂದು ನೀತಿ. ಎಸ್‌ಬಿಐ ಕಾರ್ಡ್‌ನ ವೆಬ್‌ಸೈಟ್‌ನಲ್ಲಿ "ಗ್ರಾಹಕ ಕುಂದುಕೊರತೆ ಪರಿಹಾರ ನೀತಿ" ಅಡಿಯಲ್ಲಿ ಇದನ್ನು ನವೀಕರಿಸಲಾಗಿದೆ. ನೀತಿಯು ಗ್ರಾಹಕರನ್ನು ಪರಿಗಣಿಸುವಿಕೆಯಲ್ಲಿನ ಪಾರದರ್ಶಕತೆ ಮತ್ತು ನ್ಯಾಯದ ತತ್ವಗಳನ್ನು ಆಧರಿಸಿದೆ.

e) ಕಾರ್ಡ್‌ಧಾರಕರು ಅಥವಾ ಯಾವುದೇ ಹೆಚ್ಚುವರಿ ಕಾರ್ಡ್‌ಧಾರಕರನ್ನು ಉಲ್ಲೇಖಿಸದೆ, ಕಾರ್ಡ್ ಅಥವಾ ಪಿನ್‌ನ ನಷ್ಟ, ಕಳ್ಳತನ ಅಥವಾ ದುರುಪಯೋಗದ ಬಗ್ಗೆ ಎಸ್‌ಬಿಐಸಿಪಿಎಸ್‌ಎಲ್ ಪರಿಗಣಿಸುವ ಯಾವುದೇ ಮಾಹಿತಿಯನ್ನು ಪೊಲೀಸ್ ಅಥವಾ ಇತರ ಸಂಬಂಧಿತ ಅಧಿಕಾರಿಗಳಿಗೆ ಎಸ್‌ಬಿಐಸಿಪಿಎಸ್‌ಎಲ್ ನೀಡಬಹುದು.

f) ನಿಮ್ಮ ಕಾರ್ಪೋರೇಟ್ ಕಾರ್ಡ್ ಖಾತೆಯ ಸಂಪರ್ಕ ವಿವರಗಳಲ್ಲಿನ ಬದಲಾವಣೆಗಳನ್ನು ನಿಮ್ಮ ಹೊಸ ಮತ್ತು ಸಿಸ್ಟಮ್‌ನಲ್ಲಿರುವ ಹಿಂದಿನ ಸಂಪರ್ಕ ವಿವರಗಳಿಗೆ ತಿಳಿಸಲಾಗುತ್ತದೆ. ನಿಮ್ಮ ಪ್ರಸ್ತುತ ಸಂಪರ್ಕ ವಿವರಗಳನ್ನು ನಮ್ಮ ದಾಖಲೆಗಳಲ್ಲಿ ನವೀಕರಿಸಲು ಸೂಚಿಸಲಾಗಿದೆ.

7. ಪ್ರಕಟಣೆ

ಕಾರ್ಡ್‌ಧಾರಕರನ್ನು ವರದಿ ಮಾಡುವ ಉದ್ದೇಶದ ಬಗ್ಗೆ ಸಾಕಷ್ಟು ಸೂಚನೆ ನೀಡಿದ ನಂತರವೇ ಅಸ್ತಿತ್ವದಲ್ಲಿರುವ ಅಥವಾ ಭವಿಷ್ಯದ ಯಾವುದೇ ಕ್ರೆಡಿಟ್ ಬ್ಯೂರೋಗಳೊಂದಿಗೆ ಕಾರ್ಡ್‌ಧಾರಕರ ಮಾಹಿತಿಯನ್ನು ಹಂಚಿಕೊಳ್ಳಲು ಎಸ್‌ಬಿಐಸಿಪಿಎಸ್‌ಎಲ್‌ಗೆ ಅಧಿಕಾರವಿದೆ ಎಂದು ಕಾರ್ಡ್‌ಧಾರಕರು ಒಪ್ಪಿಕೊಂಡಿದ್ದಾರೆ, ಮತ್ತು ಅಂತಹ ಮಾಹಿತಿಯು ಕಾರ್ಡ್‌ಧಾರಕರ ಸಕಾರಾತ್ಮಕ ಅಥವಾ ನಕಾರಾತ್ಮಕ ಕಾರ್ಯಕ್ಷಮತೆ/ಡೀಫಾಲ್ಟ್‌ಗೆ ಸಂಬಂಧಿಸಿರಬಹುದು. ಕ್ರೆಡಿಟ್ ಬ್ಯೂರೋ ವರದಿಯಲ್ಲಿ ಪ್ರತಿಫಲಿಸಲು ಅಂತಹ ನವೀಕರಣವು 45-60 ದಿನಗಳನ್ನು ತೆಗೆದುಕೊಳ್ಳಬಹುದು. ಕ್ರೆಡಿಟ್ ಇನ್ಫರ್ಮೇಷನ್ ಬ್ಯೂರೋ ಇಂಡಿಯಾ ಲಿಮಿಟೆಡ್ (ಸಿಬಿಲ್) ಎನ್ನುವುದು, ಭಾರತೀಯ ಹಣಕಾಸು ವ್ಯವಸ್ಥೆಯ ಕಾರ್ಯಕ್ಷಮತೆ ಮತ್ತು ಸ್ಥಿರತೆಯನ್ನು ಸುಧಾರಿಸಲು ಭಾರತ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನ ಒಂದು ಉಪಕ್ರಮವಾಗಿದೆ. ಇದು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ನಡುವೆ ಮಾಹಿತಿ ವಿನಿಮಯಕ್ಕಾಗಿ ಪರಿಣಾಮಕಾರಿ ಕಾರ್ಯವಿಧಾನವನ್ನು ಒದಗಿಸುವ ಆರ್‌ಬಿಐನ ಪ್ರಯತ್ನಗಳಿಗೆ ಅನುಗುಣವಾಗಿರುತ್ತದೆ, ಇದರಿಂದಾಗಿ

ಕಾರ್ಡ್‌ಧಾರಕರಿಗೆ ವಿವಿಧ ಸಂಸ್ಥೆಗಳಿಂದ ಉತ್ತಮ ಸಾಲ ನಿಯಮಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಕಾರ್ಡ್ ಖಾತೆಗಳು, ಪರಿಶೀಲನೆ ಮತ್ತು ಇತರ ಆಡಳಿತಾತ್ಮಕ ಸೇವೆಗಳ ಸರಿಯಾದ ಕಾರ್ಯಾಚರಣೆಗಾಗಿ ಹಣಕಾಸು ಸಂಸ್ಥೆ, ಉದ್ಯೋಗದಾತರು ಮತ್ತು ಎಸ್‌ಬಿಐಸಿಪಿಎಸ್‌ಎಲ್ ತೊಡಗಿಸಿಕೊಂಡಿರುವ ಇತರ ಮೂರನೇ ವ್ಯಕ್ತಿಗಳೊಂದಿಗಿನ ಪಾವತಿಗಳಲ್ಲಿ ಡೀಫಾಲ್ಟ್ ಸೇರಿದಂತೆ ಕಾರ್ಡ್‌ಧಾರಕರ ಮಾಹಿತಿಯನ್ನು ಹಂಚಿಕೊಳ್ಳಲು ಎಸ್‌ಬಿಐಸಿಪಿಎಸ್‌ಎಲ್‌ಗೆ ಅಧಿಕಾರವಿದೆ ಎಂದು ಕಾರ್ಡ್‌ಧಾರಕರು ಒಪ್ಪಿಕೊಳ್ಳುತ್ತಾರೆ. ಎಸ್‌ಬಿಐಸಿಪಿಎಸ್‌ಎಲ್ ಅಥವಾ ಅದರ ಗುಂಪು ಕಂಪನಿಗಳು, ಸಹಾಯಕ ಸಂಸ್ಥೆಗಳು, ಅಂಗಸಂಸ್ಥೆಗಳು ಮತ್ತು/ಅಥವಾ ಸಹವರ್ತಿಗಳ ವಿವಿಧ ಉತ್ಪನ್ನಗಳು ಮತ್ತು ಸೇವೆಗಳನ್ನು ಮಾರಾಟ ಮಾಡುವ ಮತ್ತು ನೀಡುವ ಉದ್ದೇಶಕ್ಕಾಗಿ ಎಸ್‌ಬಿಐಸಿಪಿಎಸ್‌ಎಲ್ ಯಾವುದೇ ಪೋಷಕ, ಸಹಾಯಕ ಸಂಸ್ಥೆ, ಅಂಗಸಂಸ್ಥೆ ಅಥವಾ ಎಸ್‌ಬಿಐಸಿಪಿಎಸ್‌ಎಲ್‌ನ ಸಹವರ್ತಿಗಳೊಂದಿಗೆ ಕಾರ್ಡ್‌ಧಾರಕರ ಮಾಹಿತಿಯನ್ನು ಹಂಚಿಕೊಳ್ಳಬಹುದು.

ಎಸ್‌ಬಿಐ ಕಾರ್ಡ್‌ನ ಅತ್ಯಂತ ಪ್ರಮುಖ ನಿಯಮಗಳು ಮತ್ತು ಷರತ್ತುಗಳು www.sbicard.com ನಲ್ಲಿ ಸಹ ಲಭ್ಯವಿದೆ

ಪ್ರಮುಖ ನಿಯಂತ್ರಕ ಮಾಹಿತಿ

- ಭಾರತದಲ್ಲಿ ಮತ್ತು ವಿದೇಶದಲ್ಲಿ ಬಳಸಲು ಕಾರ್ಡ್ ಮಾನ್ಯವಾಗಿದೆ. ಆದಾಗ್ಯೂ, ನೇಪಾಳ ಮತ್ತು ಭೂತಾನ್‌ನಲ್ಲಿ ವಿದೇಶಿ ಕರೆನ್ಸಿ ವಹಿವಾಟು ನಡೆಸಲು ಇದು ಮಾನ್ಯವಾಗಿಲ್ಲ.
- ಭಾರತದ ಹೊರಗೆ ವಹಿವಾಟು ನಡೆಸಲು ಕಾರ್ಡ್‌ನ ಬಳಕೆಯನ್ನು ಆರ್‌ಬಿಐನ ವಿನಿಮಯ ನಿರ್ವಹಣಾ ನಿಯಮಗಳು ಮತ್ತು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ 1999 ಸೇರಿದಂತೆ ಅನ್ವಯವಾಗುವ ಕಾನೂನಿಗೆ ಅನುಸಾರವಾಗಿ ನಡೆಸಬೇಕು. ಇಂಟರ್ನೆಟ್ ಟ್ರೇಡಿಂಗ್ ಪೋರ್ಟಲ್‌ಗಳ ಮೂಲಕ ವಿದೇಶಿ ವಿನಿಮಯ ವ್ಯಾಪಾರವನ್ನು ಅನುಮತಿಸಲಾಗುವುದಿಲ್ಲ. ಯಾವುದೇ ಉಲ್ಲಂಘನೆ ಮಾಡಿದರೆ ಅಥವಾ ಅನುಸರಿಸಲು ವಿಫಲವಾದರೆ, ದಂಡದ ಕ್ರಮಕ್ಕೆ ನೀವು ಹೊಣೆಗಾರರಾಗಬಹುದು. ನಿಮ್ಮ ವಿದೇಶಿ ವಿನಿಮಯ ಅರ್ಹತೆಗೆ ಸಂಬಂಧಿಸಿದಂತೆ ನಿಮ್ಮ ಅಧಿಕೃತ ಮಾರಾಟಗಾರರನ್ನು (ಎಡಿ) ನೀವು ಸಂಪರ್ಕಿಸಬೇಕು.
- ಕಾರ್ಪೋರೇಟ್ ಕಾರ್ಡ್ ಖಾತೆಯಲ್ಲಿ ನೀವು ಯಾವುದೇ ಕ್ರೆಡಿಟ್ ಬ್ಯಾಲೆನ್ಸ್ ಅನ್ನು ಹೊಂದಿದ್ದರೆ, ಈ ಕ್ರೆಡಿಟ್ ಬ್ಯಾಲೆನ್ಸ್ ಅನ್ನು ನಿಮಗೆ ಹಿಂದಿರುಗಿಸುವ ಹಕ್ಕನ್ನು ಎಸ್‌ಬಿಐ ಕಾರ್ಡ್ ಹೊಂದಿದೆ.
- ಆರ್‌ಬಿಐನ ಮಾಸ್ಟರ್ ನಿರ್ದೇಶನದಡಿಯಲ್ಲಿ - ಜಂಟಿ ಉದ್ಯಮ/ವಿದೇಶದಲ್ಲಿ ಸಂಪೂರ್ಣ ಸ್ವಾಮ್ಯದ ಅಂಗಸಂಸ್ಥೆಯಲ್ಲಿ ನಿವಾಸಿಗಳ ನೇರ ಹೂಡಿಕೆಯು ಧನಸಹಾಯವನ್ನು ಅನುಮತಿಸುವ ವಿಧಾನವಲ್ಲವಾದ್ದರಿಂದ ಸಾಗರೋತ್ತರ ಘಟಕಗಳಲ್ಲಿನ ಹೂಡಿಕೆ ಅಥವಾ ಸಾಗರೋತ್ತರ ಘಟಕಗಳನ್ನು ಸ್ಥಾಪಿಸುವಂತಹ ಬಂಡವಾಳ ಖಾತೆ ವಹಿವಾಟುಗಳಿಗೆ ಹಣ ರವಾನೆ/ಪಾವತಿಗಳನ್ನು ಮಾಡಲು ದಯವಿಟ್ಟು ಕಾರ್ಪೋರೇಟ್ ಕಾರ್ಡ್‌ಗಳನ್ನು ಬಳಸಬೇಡಿ.
- ಆರ್‌ಬಿಐ ಮಾಸ್ಟರ್ ಸುತ್ತೋಲೆ ಪ್ರಕಾರ- ನಿವಾಸಿಗಳಿಗಾಗಿ ಭಾರತ ಸೌಲಭ್ಯಗಳಿಂದ ವಿವಿಧ ಹಣ ರವಾನೆಯ ಕುರಿತ ಮಾಸ್ಟರ್ ಸುತ್ತೋಲೆಯ ಪ್ರಕಾರ, ಲಾಟರಿ ಟಿಕೆಟ್‌ಗಳು, ನಿಷೇಧಿತ ಅಥವಾ ಬಹಿಷ್ಕೃತ ನಿಯತಕಾಲಿಕೆಗಳು ಮುಂತಾದ ನಿಷೇಧಿತ ವಸ್ತುಗಳನ್ನು ಖರೀದಿಸಲು,

ಸ್ವೀಪ್‌ಸ್ಟೇಕ್‌ಗಳಲ್ಲಿ ಭಾಗವಹಿಸುವುದು, ಕಾಲ್-ಬ್ಯಾಕ್ ಸೇವೆಗಳಿಗೆ ಪಾವತಿ ಮಾಡಲು ಕಾರ್ಪೋರೇಟ್ ಕಾರ್ಡ್ ಬಳಸುವುದನ್ನು ನಿಷೇಧಿಸಲಾಗಿದೆ. ಅಂತಹ ವಸ್ತುಗಳು/ಚಟುವಟಿಕೆಗಳಿಗೆ ವಿದೇಶಿ ವಿನಿಮಯದ ಯಾವುದೇ ಹಿಂತೆಗೆದುಕೊಳ್ಳುವಿಕೆಯನ್ನು ಅನುಮತಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಿವಾಸಿಗಳಿಗಾಗಿ ಭಾರತ ಸೌಲಭ್ಯಗಳಿಂದ ವಿವಿಧ ಹಣ ರವಾನೆಯ ಕುರಿತ ಮಾಸ್ಟರ್ ಸುತ್ತೋಲೆಯನ್ನು ನೋಡಿ.

8. *ಶುಲ್ಕಗಳ ಸೂಚಿತಪಟ್ಟಿ

ಫೀಸು	ಪ್ಲಾಟಿನಂ	ಸಿಗ್ನೇಚರ್	ವರ್ಚುವಲ್ ಕಾರ್ಡ್
ಸೇರ್ಪಡೆ ಫೀಸು (ಒಂದು ಬಾರಿ)	ಇಲ್ಲ	ಇಲ್ಲ	ಇಲ್ಲ
ವಾರ್ಷಿಕ ಫೀಸು (p.a.)	ಇಲ್ಲ	ರೂ. 499	ಇಲ್ಲ
ವಿಸ್ತೃತ ಕ್ರೆಡಿಟ್			
ಬಡ್ಡಿರಹಿತ ಸಾಲದ ಅವಧಿ	20-50 ದಿನಗಳು (ಚಿಲ್ಲರೆ ಖರೀದಿಗೆ ಮತ್ತು ಒಂದು ವೇಳೆ ಹಿಂದಿನ ತಿಂಗಳ ಬಾಕಿ ಮೊತ್ತವನ್ನು ಪೂರ್ಣವಾಗಿ ಪಾವತಿಸಿದರೆ ಮಾತ್ರ ಅನ್ವಯಿಸುತ್ತದೆ) 15-32 ದಿನಗಳು (ಎಸ್‌ಬಿಐ ಕಾರ್ಪೋರೇಟ್ ಯುಟಿಲಿಟಿ ಕಾರ್ಡ್‌ನ ಸಂದರ್ಭದಲ್ಲಿ ಮಾತ್ರ ಅನ್ವಯಿಸುತ್ತದೆ)		
ಹಣಕಾಸು ಶುಲ್ಕಗಳು#	ವಹಿವಾಟಿನ ದಿನಾಂಕದಿಂದ 3.35% p.m. (40.2% p.a.) ರವರೆಗೆ (ಇದು ಚಾರ್ಜ್ ಕಾರ್ಡ್ ಆಗಿದೆ ಮತ್ತು ರಿವಾಲ್ವಿಂಗ್ ಸೌಲಭ್ಯವನ್ನು ನೀಡುವುದಿಲ್ಲ)		
ಪಾವತಿಸಬೇಕಾದ ಒಟ್ಟು ಮೊತ್ತ	ಒಟ್ಟು ಉಳಿದಿರುವ ಬಾಕಿ		
ನಗದು ಮುಂಗಡ (ಅನ್ವಯಿಸಿದಲ್ಲಿ)			
ನಗದು ಮುಂಗಡ ಮಿತಿ (ಅನ್ವಯಿಸಿದಲ್ಲಿ)	ವ್ಯತ್ಯಯ		
ಉಚಿತ ಕ್ರೆಡಿಟ್ ಅವಧಿ	ಇಲ್ಲ		
ಹಣಕಾಸು ಶುಲ್ಕಗಳು#	ಹಿಂಪಡೆಯುವಿಕೆ ದಿನಾಂಕದಿಂದ 3.35% p.m. (40.2% p.a.) ವರೆಗೆ		
ನಗದು ಮುಂಗಡ ಫೀಸು (ಅನ್ವಯಿಸಿದಲ್ಲಿ)			
ಎಸ್‌ಬಿಐ ಎಟಿಎಂ ಗಳು /	ಹಿಂಪಡೆಯುವಿಕೆ ಮೊತ್ತದ 2.5% ವರೆಗೆ ಅಥವಾ ಪ್ರತಿ		
ಇತರ ದೇಶೀಯ ಎಟಿಎಂ ಗಳು	ವಹಿವಾಟಿಗೆ ರೂ. 450ವರೆಗೆ (ಯಾವುದು ಹೆಚ್ಚಿರುತ್ತದೆಯೋ)		
ಅಂತರರಾಷ್ಟ್ರೀಯ ಎಟಿಎಂಗಳು	ಹಿಂಪಡೆಯುವಿಕೆ ಮೊತ್ತದ 3% ವರೆಗೆ ಅಥವಾ ಪ್ರತಿ ವಹಿವಾಟಿಗೆ ರೂ. 450ವರೆಗೆ (ಯಾವುದು ಹೆಚ್ಚಿರುತ್ತದೆಯೋ)		
ಇತರ ಶುಲ್ಕಗಳು ಮತ್ತು ಫೀಸುಗಳು (ಅನ್ವಯಿಸಿದಲ್ಲಿ)			
ನಗದು ಪಾವತಿ ಫೀಸು	ರೂ. 100		
ಚೆಕ್ ಪಿಕಪ್	ರೂ. 90		
ಹೇಳಿಕೆ ಮರುಪಡೆಯುವಿಕೆ	ಇಲ್ಲ		
ಚೆಕ್ ಪಾವತಿ ಫೀಸು	ರೂ. 100		
ಪಾವತಿ ಅಸ್ವೀಕೃತಿ ಫೀಸು	ಪಾವತಿ ಮೊತ್ತದ 2% (ಕನಿಷ್ಠ ರೂ.350 ಗಳಿಗೆ ಒಳಪಟ್ಟಿರುತ್ತದೆ)		

ವಿಳಂಬ ಪಾವತಿ	**ರೂ.0 ರಿಂದ ರೂ 200 ರವರೆಗೆ ಬಾಕಿ ಇರುವ ಒಟ್ಟು ಮೊತ್ತಕ್ಕೆ ಇರುವುದಿಲ್ಲ;** **ರೂ.200 ಕ್ಕಿಂತ ಹೆಚ್ಚಿನ ಮತ್ತು ರೂ. 500 ರವರೆಗಿನ ಒಟ್ಟು ಬಾಕಿ ಮೊತ್ತಕ್ಕೆ ರೂ.100;** **ರೂ.500 ಕ್ಕಿಂತ ಹೆಚ್ಚಿನ ಮತ್ತು ರೂ. 1000 ರವರೆಗಿನ ಒಟ್ಟು ಬಾಕಿ ಮೊತ್ತಕ್ಕೆ ರೂ.400;** **ರೂ.1000 ಕ್ಕಿಂತ ಹೆಚ್ಚಿನ ಮತ್ತು ರೂ. 10,000 ರವರೆಗಿನ ಒಟ್ಟು ಬಾಕಿ ಮೊತ್ತಕ್ಕೆ ರೂ.500;** **ರೂ.10,000 ಕ್ಕಿಂತ ಹೆಚ್ಚಿನ ಒಟ್ಟು ಬಾಕಿ ಮೊತ್ತಕ್ಕೆ ರೂ.750**
ಹೆಚ್ಚುವರಿ ಮಿತಿ	ಕಾರ್ಪೋರೇಟ್ ಕಾರ್ಡ್‌ಗೆ ಅನ್ವಯಿಸುವುದಿಲ್ಲ
ತುರ್ತು ಕಾರ್ಡ್ ಬದಲಿ	ಪೂರಕ
ವಿದೇಶಿ ಕರೆನ್ಸಿ ವಹಿವಾಟು	ಪರಿವರ್ತನೆ ಮಾರ್ಕ್ ಅಪ್: 3.5% ವರೆಗೆ
ವಾರ್ಷಿಕ ಪ್ರಯೋರಿಟಿ ಪಾಸ್ ಫೀಸು	ಪ್ಲಾಟಿನಂಗಾಗಿ ರೂ. 180 ರವರೆಗೆ ಮತ್ತು ಸಿಗ್ನೇಚರ್‌ಗಾಗಿ ಪೂರಕ
ಪ್ರಯೋರಿಟಿ ಪಾಸ್ ಲೌಂಜ್ ಶುಲ್ಕಗಳು	ಪ್ರಯೋರಿಟಿ ಪಾಸ್ ಕಾರ್ಯಕ್ರಮದ ಮೂಲಕ ಭಾರತದ ಒಳಗಿನ ಮತ್ತು ಹೊರಗಿನ ಎಲ್ಲಾ ಏರ್‌ಪೋರ್ಟ್ ಲಾಂಜ್ ಭೇಟಿಗಳಿಗೆ ಪ್ರತಿ ಭೇಟಿಗೆ $ 27 ಬಳಕೆಯ ಶುಲ್ಕ + ಅನ್ವಯವಾಗುವ ತೆರಿಗೆಗಳನ್ನು ವಿಧಿಸಲಾಗುತ್ತದೆ. ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು sbicard.com ಗೆ ಭೇಟಿ ನೀಡಿ ಪ್ರಯೋರಿಟಿ ಪಾಸ್ ಹೊಂದಿರುವ ಎಸ್‌ಬಿಐ ಕಾರ್ಡ್‌ಧಾರಕನೊಂದಿಗೆ ಏರ್‌ಪೋರ್ಟ್ ಲಾಂಜ್‌ಗೆ ಭೇಟಿ ನೀಡುವ ಎಲ್ಲಾ ಅತಿಥಿಗಳಿಗೆ ಪ್ರತಿ ಭೇಟಿಗೆ $27 ಬಳಕೆಯ ಶುಲ್ಕ+ ಅನ್ವಯವಾಗುವ ತೆರಿಗೆಗಳನ್ನು ವಿಧಿಸಲಾಗುತ್ತದೆ.
ವಾರ್ಷಿಕ ಪ್ರತಿಫಲ ಫೀಸು	ರೂ. 300 ರವರೆಗೆ
ಪ್ರತಿಫಲ ಮರುಪಡೆಯುವಿಕೆ ಫೀಸು	ರೂ. 99

ಮೇಲ್ತೆರಿಗೆ

ರೈಲ್ವೆ ಟಿಕೆಟ್‌ಗಳು - ರೈಲ್ವೆ ಕೌಂಟರ್‌ಗಳು	ರೂ.30 + ವಹಿವಾಟಿನ ಮೊತ್ತದ 2.5%
ರೈಲ್ವೆ ಟಿಕೆಟ್‌ಗಳು www.irctc.co.in	ವಹಿವಾಟು ಮೌಲ್ಯದ 1.8% + ಸೇವಾ ಶುಲ್ಕ, ವಹಿವಾಟು ಮೌಲ್ಯದ 1% ಅನ್ವಯಿಸುತ್ತದೆ.
ಪೆಟ್ರೋಲ್ ಮತ್ತು ಪೆಟ್ರೋಲ್ ಪಂಪ್‌ಗಳಲ್ಲಿ ಮಾರಾಟವಾಗುವ ಎಲ್ಲಾ ಉತ್ಪನ್ನಗಳು/ಸೇವೆಗಳು	ಸಿಗ್ನೇಚರ್ ಮತ್ತು ಪ್ಲಾಟಿನಂ ಕಾರ್ಡ್‌ಗಳಿಗಾಗಿ ರೂ. 500 ಮತ್ತು ರೂ. 4000 ನಡುವಿನ ಒಂದೇ ವಹಿವಾಟಿಗೆ 1% ಮೇಲ್ತೆರಿಗೆ ಮನ್ನಾ (ಅನ್ವಯವಾಗುವ ಎಲ್ಲ ತೆರಿಗೆಗಳು + ಇತರ ಶುಲ್ಕಗಳನ್ನು ಹೊರತುಪಡಿಸಿ).
	ಸಿಗ್ನೇಚರ್ ಮತ್ತು ಪ್ಲಾಟಿನಂ ಕಾರ್ಡ್‌ಗಳಿಗಾಗಿ ಕಾರ್ಪೋರೇಟ್ ಕಾರ್ಡ್ ಖಾತೆಗೆ ಪ್ರತಿ ಹೇಳಿಕೆ ಚಕ್ರಕ್ಕೆ ಗರಿಷ್ಠ ರೂ. 250 ಮೇಲ್ತೆರಿಗೆ ಮನ್ನಾ
ಕಸ್ಟಮ್ಸ್ ಸುಂಕ ಪಾವತಿ	ವಹಿವಾಟಿನ ಮೊತ್ತದ 2.25% (ಕನಿಷ್ಠ ರೂ. 75 ಕ್ಕೆ ಒಳಪಟ್ಟಿರುತ್ತದೆ)
ಪಾವತಿ ಕ್ರಮ	ಒಟ್ಟು ಮೊತ್ತ ಬಾಕಿ (ಇದು ಅನ್ವಯವಾಗುವ ತೆರಿಗೆಗಳನ್ನು ಒಳಗೊಂಡಿರುತ್ತದೆ), ನಂತರ ಫೀಸುಗಳು ಮತ್ತು ಇತರ ಶುಲ್ಕಗಳು, ಬಡ್ಡಿ ಶುಲ್ಕಗಳು, ಚಿಲ್ಲರೆ ಬಾಕಿ ಮತ್ತು ನಗದು ಮುಂಗಡ.

* ಶುಲ್ಕದ ವೇಳಾಪಟ್ಟಿಯಲ್ಲಿನ ಯಾವುದೇ ಬದಲಾವಣೆಗಳನ್ನು ಇಮೇಲ್ ಮೂಲಕ ಸಂವಹನ ಮಾಡಲಾಗುತ್ತದೆ ಮತ್ತು ನಮ್ಮ ವೆಬ್‌ಸೈಟ್ www.sbicard.com ನಲ್ಲಿ ಲಭ್ಯವಿರುತ್ತದೆ

ಕಾರ್ಡ್ ಹಣಕಾಸು ಶುಲ್ಕವು ಡೈನಾಮಿಕ್ ಆಗಿದೆ ಮತ್ತು ಇದು ಕಾರ್ಡ್‌ಧಾರಕರ ಬಳಕೆ ಮತ್ತು ಪಾವತಿ ಮಾದರಿಗಳನ್ನು ಆಧರಿಸಿರುತ್ತದೆ ಮತ್ತು ಆವರ್ತಕ ಪರಿಶೀಲನೆಗೆ ಒಳಪಟ್ಟಿರುತ್ತದೆ.

ಮೇಲಿನ ಎಲ್ಲಾ ಫೀಸುಗಳು, ಬಡ್ಡಿ ಮತ್ತು ಶುಲ್ಕಗಳಿಗೆ ಅನ್ವಯವಾಗುವಂತೆ ಎಲ್ಲಾ ತೆರಿಗೆಗಳನ್ನು ವಿಧಿಸಲಾಗುತ್ತದೆ.

"ಅನ್ವಯವಾಗುವ ತೆರಿಗೆಗಳು" (ಜುಲೈ 1, 2017 ರಂದು ಅಥವಾ ನಂತರ ಹೊರಡಿಸಲಾದ ಹೇಳಿಕೆಗಳಿಗಾಗಿ) ಇದರರ್ಥ:

- ಹೇಳಿಕೆಯ ದಿನಾಂಕದಂದು ಎಸ್‌ಬಿಐ ಕಾರ್ಡ್‌ನ ದಾಖಲೆಗಳಲ್ಲಿ "ಹರಿಯಾಣ" ರಾಜ್ಯದಲ್ಲಿ ವಾಸಿಸುವ ಕಾರ್ಡ್‌ಧಾರಕರಿಗೆ - ಕೇಂದ್ರ ತೆರಿಗೆ @9% ಮತ್ತು ರಾಜ್ಯ ತೆರಿಗೆ @9%
- ಹೇಳಿಕೆಯ ದಿನಾಂಕದಂದು ಎಸ್‌ಬಿಐ ಕಾರ್ಡ್‌ನ ದಾಖಲೆಗಳಲ್ಲಿ "ಹರಿಯಾಣ" ಹೊರತುಪಡಿಸಿ ಬೇರೆ ರಾಜ್ಯದಲ್ಲಿ ವಾಸಿಸುವ ಕಾರ್ಡ್‌ಧಾರಕರಿಗೆ - ಇಂಟಿಗ್ರೇಟೆಡ್ ಟ್ಯಾಕ್ಸ್ @18% ನೀವು ಕಾರ್ಡ್ ಬಳಸುವುದನ್ನು ಮುಂದುವರೆಸಿದರೆ ಅದನ್ನು ಈ ತಿದ್ದುಪಡಿಗಳ ಸ್ವೀಕಾರವೆಂದು ಪರಿಗಣಿಸಲಾಗುತ್ತದೆ.

ಎಸ್‌ಬಿಐ ಕಾರ್ಡ್ ಸಹಾಯವಾಣಿ

39 02 02 02 (ಸ್ಥಳೀಯ ಎಸ್‌ಟಿಡಿ ಕೋಡ್ ಪೂರ್ವಪ್ರತ್ಯಯ), 1860 180 1290

ಈ ಡಾಕ್ಯುಮೆಂಟ್‌ನಲ್ಲಿ ಉಲ್ಲೇಖಿಸಲಾದ ಎಲ್ಲಾ ನಿಯಮಗಳು ಮತ್ತು ಷರತ್ತುಗಳು (ಶುಲ್ಕಗಳ ಸೂಚಿತಪಟ್ಟಿ ಸೇರಿದಂತೆ) ಎಲ್ಲಾ ಕಾರ್ಪೋರೇಟ್‌ಗಳಿಗೆ ಅನ್ವಯವಾಗುವ ಪ್ರಮಾಣಿತ ಷರತ್ತುಗಳು ಮತ್ತು ಶುಲ್ಕಗಳಾಗಿವೆ. ಇವುಗಳಲ್ಲಿನ ಯಾವುದೇ ಬದಲಾವಣೆಗಳನ್ನು ಎಸ್‌ಬಿಐಸಿಪಿಎಸ್‌ಎಲ್ ಮತ್ತು ಆಯಾ ಕಾರ್ಪೋರೇಟ್ ನಡುವೆ ಪ್ರತ್ಯೇಕ ಅನುಬಂಧದ ಮೂಲಕ ಪರಸ್ಪರ ಒಪ್ಪಿಕೊಳ್ಳಲಾಗುತ್ತದೆ ಅಥವಾ ಕಾರ್ಪೋರೇಟ್ ಜೊತೆ ಸಹಿ ಹಾಕಿದ ಕಾರ್ಪೋರೇಟ್ ಕಾರ್ಡ್ ಒಪ್ಪಂದದ ಒಂದು ಭಾಗವಾಗಿರುತ್ತದೆ.

ಫೆಬ್ರವರಿ 2021 ರ ಪ್ರಕಾರ ಈ ಸಂವಹನದಲ್ಲಿನ ಎಲ್ಲಾ ಮಾಹಿತಿಯು ಸರಿಯಾಗಿದೆ ಮತ್ತು ಎಸ್‌ಬಿಐಸಿಪಿಎಸ್‌ಎಲ್‌ನ ವಿವೇಚನೆಯಿಂದ ಬದಲಾವಣೆಗೆ ಒಳಪಟ್ಟಿರುತ್ತದೆ. ಎಸ್‌ಬಿಐ ಕಾರ್ಡ್‌ನ ಅತ್ಯಂತ ಪ್ರಮುಖ ನಿಯಮಗಳು ಮತ್ತು ಷರತ್ತುಗಳು www.sbicard.com ನಲ್ಲಿ ಸಹ ಲಭ್ಯವಿದೆ

ಎಸ್‌ಬಿಐ ಕಾರ್ಡ್ಸ್ & ಪೇಮೆಂಟ್ ಸರ್ವೀಸಸ್ ಲಿಮಿಟೆಡ್.
ಅಂಚೆಪೆಟ್ಟಿಗೆ ಸಂಖ್ಯೆ 28, ನವದೆಹಲಿ - 110 001
ದಯವಿಟ್ಟು ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ: www.sbicard.com

Individual Liability SI18022021